PRGI NO : KNKAN/26/A0884

E NAMMA DHURTHI NEWS KANNADA DAILY NEWS PAPER

ಈ ನಮ್ಮ
# ಧೃತಿ ನ್ಯೂಸ್
ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 171 ಪುಟಗಳು: 04 ಬೆಲೆ: 02 ದಿನಾಂಕ: 23-08-2026 ಭಾನುವಾರ | email: enammadhruthinews@gmail.com | Pho : 7353595904

# ಎಲ್ಲಾ ಕ್ಷೇತ್ರಗಳ ಸುಧಾರಣೆಯೇ ನಮ್ಮ ಬದ್ಧತೆ : ಪ್ರಧಾನಿ ಮೋದಿ




ನವದೆಹಲಿ: ಎಲ್ಲಾ ಕ್ಷೇತ್ರಗಳಲ್ಲಿನ ಸುಧಾರಣೆಗಳು ತಮ್ಮ ಸರ್ಕಾರದ ಬದ್ಧತೆಯಾಗಿದ್ದು, ದೇಶದ ನಿರಂತರ ಬೆಳವಣಿಗೆಯ ವೇಗವನ್ನು ಕಾಯ್ದುಕೊಳ್ಳಲು ಭಾರತ ಹಲವು ಕ್ರಮಗಳನ್ನು ಮುಂದುವರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಎಕನಾಮಿಕ್ ಟೈಮ್ಸ್ ವರ್ಲ್ಡ್ ಲೀಡರ್ಸ್ ಫೋರಂ ಉದ್ದೇಶಿಸಿ ಮಾತನಾಡಿದ ಅವರು, ಭಾರತ ತನ್ನ ನೀತಿಗಳಲ್ಲಿ ರಾಜಕೀಯ ಸ್ಥಿರತೆ ಮತ್ತು ನಿರಂತರತೆಯನ್ನು ಹೊಂದಿದೆ. ಹೀಗಾಗಿ ಜಗತ್ತು ಭಾರತವನ್ನು ಬೆಳವಣಿಗೆ ಮತ್ತು ಭರವಸೆಯ ಉಜ್ವಲ ತಾಣವಾಗಿ ನೋಡುತ್ತಿದೆ ಎಂದರು. ನಿರಂತರ ಬೆಳವಣಿಗೆಯ ವೇಗವನ್ನು ಖಚಿತಪಡಿಸಿಕೊಳ್ಳಲು ಭಾರತ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಗಳೊಂದಿಗೆ ದೇಶ ಮುನ್ನಡೆಯುತ್ತಿದ್ದು, ಸುಧಾರಣೆಗಳು ನಮ್ಮ ಬದ್ಧತೆಯಾಗಿವೆ ಎಂದು ಹೇಳಿದರು.

ಸಂಪನ್ಮೂಲಗಳ ಶಸ್ತ್ರೀಕರಣದಿಂದಾಗಿ ಜಗತ್ತು ಬೆಳವಣಿಗೆಗೆ ಸಂಬಂಧಿಸಿದ ಹಲವು ಕಳವಳಗಳನ್ನು ಎದುರಿಸುತ್ತಿದೆ. ಆದರೆ ಭಾರತವನ್ನು ಮಾತ್ರ ಬೆಳವಣಿಗೆಯ ಉಜ್ವಲ ತಾಣವಾಗಿ ನೋಡಲಾಗುತ್ತಿದೆ ಎಂದು ಪ್ರಧಾನಿ ಹೇಳಿದರು.ಆಡಳಿತದ ಮೇಲೆ ಬಲವಾದ ಗಮನ ಕೇಂದ್ರೀಕರಿಸಿರುವ ಸುಧಾರಣೆಗಳಿಗೆ ಎನ್‌ಡಿಎ ಸರ್ಕಾರ ಸ್ಪಷ್ಟ ಮಾರ್ಗಸೂಚಿಯನ್ನು ಹೊಂದಿದೆ. ಹೆಚ್ಚಿನ ಉತ್ಪಾದನೆಗೆ ಉತ್ತೇಜನ ನೀಡುವ ಮೂಲಕ ಸರ್ಕಾರ ಪ್ರತಿಫಲ ನೀಡುತ್ತಿದೆ ಎಂದರು. ಜನರನ್ನು ಕೊರತೆಯಲ್ಲಿಡುವುದು ಹಿಂದಿನ ಸರ್ಕಾರಗಳ ನೀತಿಯಾಗಿತ್ತು. ಇದರಿಂದ ಜನರು ತಮ್ಮ ಮೂಲಭೂತ ಅಗತ್ಯಗಳಿಗಾಗಿ ಸರ್ಕಾರದ ಮುಂದೆ ಬೇಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಮೋದಿ ಆರೋಪಿಸಿದರು. ಹಿಂದಿನ ಸರ್ಕಾರಗಳ 'ಲೈಸೆನ್ಸ್ ರಾಜ್' ನಿರುದ್ಯೋಗದ ಹೊರೆಯನ್ನು ಹೆಚ್ಚಿಸಿತ್ತು. ಆದರೆ ತಮ್ಮ ಸರ್ಕಾರದ ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಮಾದರಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಹೇಳಿದರು.

"ನಾವು ಕೇವಲ ನಿಯಮಗಳನ್ನು ಬದಲಾಯಿಸುತ್ತಿಲ್ಲ. ಸಂಪೂರ್ಣ ನಿಯಂತ್ರಣ ವ್ಯವಸ್ಥೆಯನ್ನೇ ಬದಲಾಯಿಸುತ್ತಿದ್ದೇವೆ. ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿ ನಿಷೇಧಿಸದ ಕೆಲಸವನ್ನು ಮಾಡಲು ಅನಗತ್ಯ ನಿಯಂತ್ರಣ ಇರಬಾರದು ಎಂಬುದು ನಮ್ಮ ಸರ್ಕಾರದ ನಂಬಿಕೆ" ಎಂದು ಪ್ರಧಾನಿ ಹೇಳಿದರು. ತಮ್ಮ ಸರ್ಕಾರ ನೀತಿ ಮಟ್ಟದಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳನ್ನು ಜಾರಿಗೊಳಿಸುತ್ತಿದ್ದು, ಆಡಳಿತದ ಮಟ್ಟದಲ್ಲಿಯೂ ಹಾಗೂ ಜೀವನ ಸುಲಭಗೊಳಿಸುವ ನಿಟ್ಟಿನಲ್ಲಿಯೂ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ ಎಂದರು. 'ನಿಷೇಧಿಸದ ಹೊರತು ಅನುಮತಿ' ಎಂಬ ಮಾದರಿಯಿಂದ 'ನಿಷೇಧಿಸಿದ ಹೊರತು ಅನುಮತಿ' ಎಂಬ ಮಾದರಿಯತ್ತ ಸಾಗುತ್ತಿದ್ದೇವೆ ಎಂದು ಹೇಳಿದರು.

ಭಾರತೀಯ ರೈಲ್ವೆ, ದೆಹಲಿ ಮೆಟ್ರೋ ಮತ್ತು ನಮೋ ರ್‍ಯಾಪಿಡ್ ರೈಲಿನಂತಹ ಕ್ಷೇತ್ರಗಳಲ್ಲಿನ ಸಣ್ಣ ಸುಧಾರಣೆಗಳೂ ದೇಶವು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ ಎಂಬುದನ್ನು ತೋರಿಸುತ್ತವೆ ಎಂದು ಪ್ರಧಾನಿ ಹೇಳಿದರು. ವಿದೇಶಿ ಉಪಗ್ರಹಗಳು ಭಾರತದ ನಕ್ಷೆಯನ್ನು ರಚಿಸಬಹುದಾದರೂ, ಅನುಮತಿಯಿಲ್ಲದೆ ಯಾರೂ ಭಾರತದ ನಕ್ಷೆಯನ್ನು ತಯಾರಿಸಲು ಸಾಧ್ಯವಿಲ್ಲ ಎಂಬಂತಹ ನಿಯಮಗಳು ಈ ಹಿಂದೆ ಇದ್ದವು. ಆದರೆ ತಮ್ಮ ಸರ್ಕಾರ ಈ ವ್ಯವಸ್ಥೆಯಲ್ಲಿ ಬದಲಾವಣೆ ತಂದಿದೆ ಎಂದು ಅವರು ಹೇಳಿದರು.ಗಡಿ ಮೂಲಸೌಕರ್ಯವು ಭಾರತದ ಶಕ್ತಿಯಾಗಿರಬೇಕೇ ಹೊರತು ದೌರ್ಬಲ್ಯವಾಗಬಾರದು ಎಂದು ಸರ್ಕಾರ ನಿರ್ಧರಿಸಿದೆ. ಈ ಮೂಲಕ ಭಾರತದ ಗಡಿ ಮೂಲಸೌಕರ್ಯದ ಚಿತ್ರಣವನ್ನೇ ಬದಲಾಯಿಸಿದ್ದೇವೆ ಎಂದರು. ವಿಶ್ವದಲ್ಲೇ ಅತ್ಯಂತ ಅಗ್ಗದ ಡೇಟಾ ಭಾರತದಲ್ಲಿ ಲಭ್ಯವಿದೆ. ದೇಶವು ಅಗ್ಗದ ಮತ್ತು ಗುಣಮಟ್ಟದ ಮೊಬೈಲ್ ಫೋನ್‌ಗಳನ್ನು ತಯಾರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

## ಈದ್ ಮಿಲಾದ್ ಹಬ್ಬವನ್ನು ಶಾಂತಿ ಸೌಹಾರ್ದತೆಯಿಂದ ಆಚರಿಸಲು ಕರೆ. ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ




ಧೃತಿ ನ್ಯೂಸ್ ಸುದ್ದಿ

ಹಗರಿಬೊಮ್ಮನಹಳ್ಳಿ: ಈ ಸಲದ ಮುಂಬರಲಿರುವ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಬಾಂಧವರು ಅತ್ಯಂತ ಶಾಂತಿ ಸೌಹಾರ್ದತೆಯಿಂದ ಆಚರಿಸಲು ಡಿ ವೈ ಎಸ್ ಪಿ ಮಲ್ಲೇಶ್ ದೊಡ್ಮನಿ ಮನವಿ ಮಾಡಿದರು. ಅವರು ಇಂದು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಿದ್ದ ಈದ್ ಮಿಲಾದ್ ಶಾಂತಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರೆದು ಧಾರ್ಮಿಕ ಹಬ್ಬದ ಸಂದರ್ಭದಲ್ಲಿ ಕಿಡಿಗೇಡಿಗಳು ಶಾಂತಿ ಕದಡುವ ಕೆಲಸವನ್ನು ಮಾಡಿದಲ್ಲಿ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು, ಅಲ್ಲದೆ ಸಮಾಜದ ಶಾಂತಿ ಹದಗೆಡಿಸುವವರು ಯಾರಾದರೂ ಕಂಡುಬಂದಲ್ಲಿ ಅಂಥವರ ಮಾಹಿತಿಯನ್ನು ತಪ್ಪದೆ ಪೊಲೀಸರಿಗೆ ತಿಳಿಸತಕ್ಕದ್ದು ಎಂದು ಹೇಳಿದರು.

ವೃತ ಪೊಲೀಸ್ ನಿರೀಕ್ಷಕ ವಿಕಾಸ್ ಲಂಬಾಣಿ ಮಾತನಾಡಿ, ಹಗರಿಬೊಮ್ಮನಹಳ್ಳಿ ತಾಲೂಕು ಉತ್ತಮ ಜನರಿಂದ ತುಂಬಿದ್ದು ತಾವು ಬಂದ ಇಷ್ಟು ವರ್ಷಗಳಲ್ಲಿ ಎಂದಿಗೂ ಕೂಡ ಶಾಂತಿ ಕದಡುವ ಕೆಲಸ ಆಗಿಲ್ಲ, ಇಲ್ಲಿಯ ಜನರು ಐಕ್ಯತೆಯಿಂದ ಜೀವನ ನಡೆಸುತ್ತಾರೆ. ಆದರೂ ಕೂಡ ಮುಸ್ಲಿಂ ಬಾಂಧವರು ತಮ್ಮ ಮೆರವಣಿಗೆ ಹಾಗೂ ನಮಾಜು ಮಾಡುವ ಸಂದರ್ಭದಲ್ಲಿ ಸಮಯ, ಶಿಸ್ತನ್ನು ಕಾಪಾಡಿಕೊಳ್ಳಲು ಕರೆ ನೀಡಿದರು. ಈದ್ ಮಿಲಾದ್ ಹಬ್ಬವನ್ನು ಆಚರಿಸುವಾಗ ಅನ್ಯ ಧರ್ಮೀಯರೂ ಕೂಡ ಅವರಿಗೆ ಸಹಕರಿಸುವುದರ ಮೂಲಕ ಸಮಾಜದ ಸಾಮರಸ್ಯವನ್ನು ಕಾಪಾಡಲು ಕರೆ ನೀಡಿದರು. ಪತ್ರಕರ್ತ ಎಂ. ಶಿವಮೂರ್ತಿ ಮಾತನಾಡಿ, ಭಾರತ ದೇಶವು ಹಲವು ಧರ್ಮ, ಸಂಸ್ಕೃತಿ, ಆಚಾರ, ವಿಚಾರ, ಆಹಾರ, ವಿಹಾರ, ಉಡುಗೆ,ತೊಡುಗೆಯಲ್ಲಿ ವೈವಿಧ್ಯತೆಯಿಂದ ತುಂಬಿದ್ದು, ನಾವೆಲ್ಲರೂ ಎಲ್ಲ ಧರ್ಮೀಯರನ್ನು ಪ್ರೀತಿಸಬೇಕು. ಧಾರ್ಮಿಕ ಸಹಿಷ್ಣುತೆ ಹಾಗೂ ಶಾಂತಿ ಸಹ ಬಾಳ್ವೆಯಿಂದ ದೈನಂದಿನ ಜೀವನದಲ್ಲಿ ವರ್ತಿಸಬೇಕು ಎಂದು ಹೇಳಿದರು. ತಾಲೂಕು ಗ್ಯಾರಂಟಿ ಅಧ್ಯಕ್ಷರಾದ ಸೊನ್ನದ ಗುರು ಬಸವರಾಜ ಮಾತನಾಡಿ ನಮ್ಮ ತಾಲೂಕು ಜಾತ್ಯಾತೀತ ವ್ಯವಸ್ಥೆಯಿಂದ ಕೂಡಿದ್ದು, ಇಲ್ಲಿ ಯಾವುದೇ ರೀತಿಯ ಜಾತಿವಾದಿಗಳು, ಮತೀಯವಾದಿಗಳಿಗೆ ಅವಕಾಶ ಇಲ್ಲ ಎಂದು ಹೇಳಿದರು. ಇದೇವೇಳೆ, ಸಭೆಯಲ್ಲಿ ಪೊಲೀಸ್ ಅಧಿಕಾರಿಗಳಾದ ಪಿಎಸ್ಐ ನಾಗರತ್ನಮ್ಮ ಕ್ರೈಂ ಪಿಎಸ್ಐ ಉಮಾಪತಿ ನಾಯಕ ಪುರಸಭೆ ಸದಸ್ಯರಾದ ತೆಲಿಗಿನಲ್ಲಿ ಇಸ್ಮಾಯಿಲ್ ಸಾಬ್ ಜೋಗಿ ಹನುಮಂತಪ್ಪ ಕೆಜಿಎನ್ ಅಲ್ಲಾಭಕ್ಷಿ ರಾಜೇಶ್ ಬ್ಯಾಡಗಿ ಸಿಕಂದರ್ ಖಾನ್ ತತ್ತಿ ಕಾಸಿಂ ಯಮನೂರ್ ಸಾಬ್ ದಾದಾಪೀರ್ ಎಣ್ಣೆ ಭಾಷಾ ಬುಡೇನ್ ಸಾಬ್ ಅರಳಿಹಳ್ಳಿ ಬಾಬು ಪೈಂಟರ್ ಸಾಬ್ ಸರ್ದಾರ್ ಸಮುದಾಯದ ಮುಖಂಡರು ಹಾಗೂ ಯುವಕರು ಇದ್ದರು ಸ್ವಾಗತ ನಿರೂಪಣೆಯನ್ನು ಪೊಲೀಸ್ ಪೆದೆ ಹನುಮಂತಪ್ಪ ಮಲ್ಲೇಶ್ ನಾಯಕ್ ಹಾಗೂ ಪೊಲೀಸ್ ಇಲಾಖೆಯವರು ನಿರ್ವಹಿಸಿದರು.

## ಶಾಲೆ-ಮನೆ-ಸಮಾಜ-ಸರ್ಕಾರ ನಾಲ್ಕು ಅಂಗಗಳು ಒಂದೇ ವೇದಿಕೆಯಲ್ಲಿ ಬೆಸೆಯುವ ಯತ್ನ

ಧೃತಿ ನ್ಯೂಸ್ ಸುದ್ದಿ

ವಿಜಯನಗರ: ಮಕ್ಕಳಿಗೆ ಶೈಕ್ಷಣಿ ಅರಿವು ಕಾರ್ಯಕ್ರಮದ ಮೂಲಕ ಶಾಲೆ-ಮನೆ-ಸಮಾಜ-ಸರ್ಕಾರ ಎಂಬ ನಾಲ್ಕು ಪ್ರಮುಖ ಅಂಗಗಳನ್ನು ಒಂದೇ ವೇದಿಕೆಯಲ್ಲಿ ಬೆಸೆಯುವ ಸತ್ಪ್ರಯತ್ನವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಉಮಾಪತಿ ಅಭಿಪ್ರಾಯ ವ್ಯಕ್ತಪಡಿಸಿದರು.



ನಗರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ವಿನೋಬಾ ಭಾವೆ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ಎಎಂಪಿ ಅಜ್ಜಯ್ಯ ಸಮಾಜಮುಖಿ ಟ್ರಸ್ಟ್ ರಿಜಿಸ್ಟರ್ ಹೊಳಗುಂದಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ, ಶಾಲಾ ಮಕ್ಕಳಿಗೆ ಶೈಕ್ಷಣಿ ಅರಿವು ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಡಿದರು. ಅರಿವು ಕಾರ್ಯಕ್ರಮದ ಮೂಲಕ ಆರೋಗ್ಯ, ಸ್ವಚ್ಛತೆ, ಬಾಲ್ಯ ವಿವಾಹ ತಡೆ, ಡಿಜಿಟಲ್ ಸುರಕ್ಷತೆ ಮತ್ತು ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು ನಮ್ಮ ಗುರಿ ಎಂದ ಅವರು, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಮುದಾಯ ಹಾಗೂ ವಿವಿಧ ಇಲಾಖೆಗಳ ಒಗ್ಗಟ್ಟಿನ ಶ್ರಮ ಅತ್ಯಗತ್ಯ ಎಂದು ಹೇಳಿದರು. ಆರ್‌ಟಿಐ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿ ವಾಗೀಶ್ ಮಾತನಾಡಿ, ಶಿಕ್ಷಣವು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಿದ್ದು, ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ನೋಡಿಕೊಳ್ಳುವುದು ಸಮಾಜದ ಜವಾಬ್ದಾರಿಯಾಗಿದೆ. ಸಮಗ್ರ ಸಮಾಜದ ವಿಕಾಸ ಹಾಗೂ ದೇಶದ ಆರ್ಥಿಕ ಪ್ರಗತಿಗೆ ಗುಣಮಟ್ಟದ ಶಿಕ್ಷಣವೇ ಮೂಲಸ್ತಂಭವಾಗಿದೆ ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ವ್ಯಕ್ತಿಯಲ್ಲಿ ಶಿಸ್ತು, ವೈಜ್ಞಾನಿಕ ಮನೋಭಾವ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಕಾರ್ಯವನ್ನು ಶಿಕ್ಷಣ ಮಾಡುತ್ತದೆ ಎಂದರು. ಇದೇ ಸಂದರ್ಭದಲ್ಲಿ ಆರ್‌ಟಿಐ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿ ವಾಗೀಶ್ ಅವರು ವಿನೋಬಾ ಭಾವೆ ಶಾಲಾ ಅಭಿವೃದ್ಧಿಗೆ ವೈಯಕ್ತಿಕವಾಗಿ ರೂ.1 ಲಕ್ಷ ಸಹಯಧಾನ ನೀಡಿದರು. ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಗಂಗಪ್ಪ, ತಾಲೂಕು ವೈದ್ಯಾಧಿಕಾರಿ ವಿನೋದ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ಮಂಜುನಾಥ, ಹಿರಿಯ ಶಿಕ್ಷಕರಾದ ಬಸವರಾಜ್, ಸಿಆರ್‌ಪಿಗಳಾದ ಮಹಮ್ಮದ್ ಇಮ್ರಾನ್, ಮಾಬು ಭಾಷಾ, ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಬಾಬು ಮಾತನಾಡಿ, ದೈಹಿಕ ಶಿಕ್ಷಕ ಜಾಕೀರ ಹುಸೇನ್ ಹಾಗೂ ಎಸ್.ಡಿ.ಎಮ್.ಸಿ. ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

## ವಿಧಾನಸಭೆ ನೂತನ ಸ್ಪೀಕರ್ ಜೆ.ಎಸ್. ಪಾಟೀಲ್‌ರಿಂದ ಕುದರಿಮೋತಿ ವಿಜಯ ಮಹಾಂತೇಶ್ವರ ಮಠಕ್ಕೆ ಭೇಟಿ

ಧೃತಿ ನ್ಯೂಸ್ ಸುದ್ದಿ



ಕುಕನೂರು: ವಿಧಾನಸಭೆಯ ನೂತನ ಸ್ಪೀಕರ್ ಆಗಿ ನೇಮಕಗೊಂಡಿರುವ ಜೆ.ಎಸ್. ಪಾಟೀಲ್ ಅವರು ಶನಿವಾರ ಕುದರಿಮೋತಿ ಗ್ರಾಮದ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ಶ್ರೀಮಠದ ಶ್ರೀ ನಿ.ಪ್ರ.ಸ್ವ. ಜಗದ್ಗುರು ವಿಜಯ ಮಹಾಂತ ಮಹಾಸ್ವಾಮಿಗಳ ದರ್ಶನ ಪಡೆದು ಆಶೀರ್ವಾದ ಸ್ವೀಕರಿಸಿದ ಸ್ಪೀಕರ್ ಜೆ. ಎಸ್. ಪಾಟೀಲ್ ಅವರು, ಮಠದ ಪರಂಪರೆ, ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳ ಕುರಿತು ಗೌರವ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಶ್ರೀ ನಿ.ಪ್ರ.ಸ್ವ. ಜಗದ್ಗುರು ವಿಜಯ ಮಹಾಂತ ಮಹಾಸ್ವಾಮಿಗಳು, "ಜೆ.ಎಸ್. ಪಾಟೀಲ್ ಅವರು ನಮ್ಮ ಮಠದ ಬಗ್ಗೆ ಅಪಾರ ಗೌರವ ಹಾಗೂ ಭಕ್ತಿಭಾವ ಹೊಂದಿದ್ದು, ಹಿಂದಿನಿಂದಲೂ ಮಠದೊಂದಿಗೆ ಆತ್ಮೀಯವಾಗಿ ನಡೆದುಕೊಂಡು ಬಂದಿದ್ದಾರೆ. ಅವರಿಗೆ ಶ್ರೀಮಠದ ಆಶೀರ್ವಾದ ಸದಾ ಇರಲಿ. ತಮ್ಮ ಹೊಸ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ರಾಜ್ಯದ ಜನರ ಆಶೋತ್ತರಗಳಿಗೆ ಸ್ಪಂದಿಸುವಂತಾಗಲಿ" ಎಂದು ಹಾರೈಸಿದರು.

ನಂತರ ಮಾತನಾಡಿದ ನೂತನ ಸ್ಪೀಕರ್ ಜೆ.ಎಸ್. ಪಾಟೀಲ್ ಅವರು, "ಕುದರಿಮೋತಿಯ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆಯುತ್ತಿರುವುದು ನನಗೆ ಅತ್ಯಂತ ಸಂತೋಷ ಹಾಗೂ ಪುಣ್ಯದ ಕ್ಷಣವಾಗಿದೆ. ಶ್ರೀಮಠದ ಮೇಲೆ ನನಗೆ ಅಪಾರ ಗೌರವ ಮತ್ತು ಭಕ್ತಿ ಇದೆ. ಶ್ರೀಗಳ ಆಶೀರ್ವಾದ ಹಾಗೂ ಮಾರ್ಗದರ್ಶನವನ್ನು ಸದಾ ಗೌರವದಿಂದ ಸ್ವೀಕರಿಸುತ್ತೇನೆ. ವಿಧಾನಸಭೆಯ ಸ್ಪೀಕರ್ ಆಗಿ ದೊರೆತಿರುವ ಜವಾಬ್ದಾರಿಯನ್ನು ನಿಷ್ಪಕ್ಷಪಾತವಾಗಿ ಹಾಗೂ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಿರ್ವಹಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಎಲ್ಲ ಸದಸ್ಯರಿಗೂ ಸಮಾನ ಅವಕಾಶ ಕಲ್ಪಿಸಿ, ಸದನದ ಗೌರವ ಮತ್ತು ಘನತೆಯನ್ನು ಕಾಪಾಡುವುದು ನನ್ನ ಪ್ರಮುಖ ಕರ್ತವ್ಯವಾಗಿದೆ. ಜನರ ಆಶೋತ್ತರಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇನೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮದ ದಳಪತಿ ಹನಮಗೌಡ ಪೊ.ಪಾಟೀಲ್, ಮಾಜಿ ಜಿ.ಪಂ.ಸದಸ್ಯ ಅಶೋಕ ತೋಟದ್, ಬಸಪ್ಪ ದೊಡ್ಡಮನಿ, ಮುದಕಪ್ಪ ರಾವಣಿಕಿ, ಮಂಜುನಾಥ ಗಟ್ಟೆಪ್ಪನವರ, ಅಮರೇಶ ತಲ್ಲೂರು, ಸುಭಾಷ್ ಈಡಿಗೇರ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಫರೀದಾಬೇಗಂ, ಬಸವರಾಜ ಗಟ್ಟೆಪ್ಪನವರ, ಮಹಾಂತಪ್ಪ ಸಿಡ್ನಾಳಿ, ಮಾಬುಸಾಬ ಮಕಾಂದರ್, ಡಾ. ಹುಸೇನಬಾಷ, ಮಂಜುನಾಥ ಸಜ್ಜನ್,ರವಿ ಕಟ್ಟಿಗಿ, ನಾಗಪ್ಪ ತಲ್ಲೂರು, ಹಾಸೀಮಸಾಬ ಮಕಾಂದರ್, ರವೀಂದ್ರ ಈಡಿಗೇರ,ಶಿವಪ್ಪ ಬೇವಿನಗಿಡದ್, ಅಶೋಕ ಗಟ್ಟೆಪ್ಪನವರ, ಶ್ರೀಕಾಂತ್ ಸಜ್ಜನ್, ದೇವಪ್ಪ ಕಾಳಿ, ಮರಿಯಪ್ಪ ಕೆಂಗಾರ್, ಈರಪ್ಪ ಕಾಳಿ ಸೇರಿದಂತೆ ಮಠದ ಭಕ್ತರು, ಗಣ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ದೈಹಿಕ ಮಾನಸಿಕ ಸ್ವಾಸ್ಥ ಸಂಕಲ್ಪಕ್ಕೆ ಏಕಾಗ್ರತೆ ಬಹುಮುಖ್ಯ : ವೆಂಕಟೇಶ್ ಬಡಿಗೇರ್



ಧೃತಿ ನ್ಯೂಸ್ ಸುದ್ದಿ

ಹೊಸಪೇಟೆ: ತಾಲೂಕು ಗುಂಡ ಸರ್ಕಾರಿ ಪ್ರೌಢಶಾಲೆ ಹಾಗೂ ಘೋರ್ಪಡೆ ಸ್ಕ್ವಯರ್ ಪ್ರೌಢಶಾಲೆ ಯಲಿ ಕೇಶವಾಗಿ ಆಯೋಜಿಸಿದ ಶ್ರೀ ಧರ್ಮಸ್ಥಳ ಮಂಜುನಾಥ ಗ್ರಾಮೀಣ ಅಭಿವೃದ್ಧಿ ಸಂಘದ ವತಿಯಿಂದ ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ ವಿಶೇಷ ಉಪನ್ಯಾಸಕರಾಗಿ ಶ್ರೀ ವೆಂಕಟೇಶ್ ಬಡಿಗೇರ್ ಅವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಮಕ್ಕಳಲ್ಲಿರುವ ದೈಹಿಕ ಮಾನಸಿಕ ತಾಳ್ಮೆ ಸಂಯಮ ಪಡೆದುಕೊಳ್ಳಬೇಕಾದರೆ ಏಕಾಗ್ರತೆ ಬಹು ಮುಖ್ಯ ಹಲವಾರು ದುಚ್ಚಟಗಳು ಮಕ್ಕಳು ಬಲಿಯಾಗುತ್ತಿದ್ದು ಮೊಬೈಲ್. ಅನಾರೋಗ್ಯಕರ ತಿನಿಸುಗಳು. ಗುಟುಕ ತಂಬಾಕು ಮಧ್ಯಪಾನ ಧೂಮಪಾನ ಮಕ್ಕಳ ಭವಿಷ್ಯಕ್ಕೆ ಸಂಚಕಾರ ಉಂಟುಮಾಡುತ್ತಿವೆ.

ಭವಿಷ್ಯತ್ತಿನಲ್ಲಿ ಬಾಳಿ ಬದುಕಬೇಕಾದ ಮಕ್ಕಳು ಏಕಾಗ್ರತೆ ಕಳೆದುಕೊಂಡು ಆತ್ಮಹತ್ಯೆಗೆ ಈಡಾಗುತ್ತಿದ್ದಾರೆ. ಉಜ್ವಲ ಭವಿಷ್ಯ ಬೆಳಗಲು ನಮ್ಮ ಪರಿಶ್ರಮ ನಮ್ಮ ಏಕಾಗ್ರತೆ ದೃಢವಾದ ನಿಲುವು ಧ್ಯಾನಗಳಿಂದ ಮಾತ್ರ ಸಾಧ್ಯ ಎಂದು ಶ್ರೀ ವೆಂಕಟೇಶ ಬಡಿಗೇರವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಅಧಿಕಾರಿಗಳಾದ ತಿರುಪತಿ. ಶರಣಬಸಪ್ಪ ಹಾಗೂ ಗುಂಡ ಗ್ರಾಮದ ಸರಕಾರಿ ಪ್ರೌಢಶಾಲೆಶಾಲೆಯ ಮುಖ್ಯ ಗುರುಗಳಾದ ಶುಭ ಹಾಗೂ ಸ್ಕ್ವಯರ್ ಪ್ರೌಢಶಾಲೆಯ ಮುಖ್ಯ ಗುರುಗಳಾದ ಸರೋಜಮ್ಮ ಮತ್ತು ರಾಣಿ ಚೆನ್ನಮ್ಮ ಪ್ರೌಢಶಾಲೆ ಹೊಸಪೇಟೆ ಮುಖ್ಯ ಗುರುಗಳಾದ ಶರಣಯ್ಯ ವಾಸುದೇವ್ ಹಾಗೂ ಶಿವಪ್ರಸಾದ್ ದೈಹಿಕ ಶಿಕ್ಷಕರು. ಕನ್ನಡ ಶಿಕ್ಷಕರದ ಶಿವಕುಮಾರ್ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**26 ರಂದು ಈದ್-ಮಿಲಾದ್ ಹಬ್ಬ | ಡಿಸಿ ಅಧ್ಯಕ್ಷತೆಯಲ್ಲಿ ಶಾಂತತಾ ಸಭೆ**

# ಶಾಂತಿ, ಸೌಹಾರ್ದತೆಯಿಂದ ಹಬ್ಬ ಆಚರಿಸಿ : ಡಿಸಿ ಸಂಗಪ್ಪ

ಧೃತಿ ನ್ಯೂಸ್ ಸುದ್ದಿ



ಬಾಗಲಕೋಟೆ: ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರ ಅವರ ಜನ್ಮದಿನದ ಸ್ಮರಣಾರ್ಥ ಆಗಸ್ಟ 26 ರಂದು ಆಚರಿಸಲಾಗುವ ಈದ್-ಮಿಲಾದ ಹಬ್ಬವನ್ನು ಜಿಲ್ಲೆಯಾದ್ಯಂತ ಶಾಂತಿಯುವ ಹಾಗೂ ಸೌಹಾರ್ದಯುತವಾಗಿ ಆಚರಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತ ಸಭಾಭಭವನದಲ್ಲಿ ಶನಿವಾರ ಈದ್-ಮಿಲಾದ ಹಬ್ಬದ ನಿಮಿತ್ಯ ಕರೆಯಲಾಗಿದ್ದ ಶಾಂತತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈದ್-ಮಿಲಾದ ಹಬ್ಬವು ಪ್ರೀತಿ, ಸಹೋದರತ್ವ, ಶಾಂತಿ ಹಾಗೂ ಸೌಹಾರ್ದತೆಯ ಸಂದೇಶ ಸಾರುವ ಹಬ್ಬವಾಗಿದ್ದು, ಎಲ್ಲ ಸಮುದಾಯಗಳ ಜನರು ಪರಸ್ಪರ ಗೌರವ ಹಾಗೂ ಸಹಬಾಳ್ವೆಯೊಂದಿಗೆ ಹಬ್ಬ ಆಚರಿಸಬೇಕು ಎಂದರು.

ಹಬ್ಬದ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಮುನ್ನೆಚ್ಚರಿಗೆ ಕ್ರಮಕೈಗೊಳ್ಳುವುದು ಹಾಗೂ ಎಲ್ಲ ಸಮುದಾಯಗಳ ನಡುವೆ ಶಾಂತಿ ಮತ್ತು ಸೌಹಾರ್ದತೆ ಕಾಪಾಡಬೇಕು. ಹಬ್ಬದ ಸಂದರ್ಭದಲ್ಲಿ ಡಿಜೆಗೆ ಅವಕಾಶ ಕಲ್ಪಿಸದಂತೆ ಸಮುದಾಯದ ಮುಖಂಡರು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಮನವಿ ಮಾಡಿಕೊಂಡಿರುವುದು ಸ್ವಾಗತಾರ್ಹ ಎಂದ ಅವರು ಇದು ಎಲ್ಲರಿಗೂ ಮಾದರಿಯಾಗಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ ಈದ್-ಮಿಲಾದ್ ಅಂಗವಾಗಿ ನಡೆಯುವ ಮೆರವಣಿಗೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿನ ಚಟುವಟಿಕೆಗಳಿಗೆ ಅಗತ್ಯ ಭದ್ರತಾ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಂದೋಬಸ್ತ, ಸಂಚಾರ ವ್ಯವಸ್ಥೆ ಮಾಡಲಾಗುತ್ತದೆ. ಪೊಲೀಸ್ ಇಲಾಖೆ ತಮ್ಮ ಜೊತೆಯಲ್ಲಿ ಇದ್ದು, ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು. ಯಾವುದೇ ರೀತಿ ಶಾಂತಿ, ಸುವ್ಯವಸ್ಥೆಗೆ ದಕ್ಕೆ ಬರದ ರೀತಿಯಲ್ಲಿ ಹಬ್ಬ ಆಚರಣೆಯಾಗಬೇಕು. ಜಿಲ್ಲೆಯ ಎಲ್ಲ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆಗಳನ್ನು ಸಹ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಮಾತನಾಡಿ, ಶಾಂತಿಯುತವಾಗಿ ಈದ್-ಮಿಲಾದ ಹಬ್ಬ ಆಚರಣೆಗೆ ಜಿಲ್ಲಾಡಳಿತ ಸಭೆ ಕರೆದ ಹಾಗೆ ತಮ್ಮ ತಮ್ಮ ಹಂತದಲ್ಲಿ ಸಭೆಗಳನ್ನು ಸಹ ನಡೆಸಲು ತಿಳಿಸಿದ ಅವರು ಗ್ರಾಮೀಣ ಭಾಗದಲ್ಲಿ ಸ್ವಚ್ಚತಾ ಕಾರ್ಯಕ್ಕೆ ಕ್ರಮವಹಿಸಲಾಗುವುದೆಂದು ತಿಳಿಸಿದರು. ಸಮುದಾಯದ ಮುಖಂಡರಾದ ಶಿಕಂದರ ಅಥಣಿ ಮಾತನಾಡಿ ಬಾಗಲಕೋಟೆ ನಗರದಲ್ಲಿ ಆಗಸ್ಟ 25 ರಿಂದ 27 ವರೆಗೆ ಮೂರು ದಿನಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಮೊದಲ ದಿನ ಅಂಜುಮನ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಪುರಾಣ ಪಠ, ಶಾಲಾ ಮಕ್ಕಳಿಮದ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಎರಡನೇ ದಿನ ಹಳೆಯ ಬಾಗಲಕೋಟೆಯಲ್ಲಿ ಹಾಗೂ ಮೂರನೇ ದಿನ ನವನಗರದ ವ್ಯಾಪ್ತಿಯಲ್ಲಿ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ ಆರ್, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಡಿವಾಯ್‌ಎಸ್‌ಪಿ ಗಜಾನನ ಸುತಾರ ಸೇರಿದಂತೆ ಸಮುದಾಯದ ಮುಖಂಡರಾದ ಎ.ಎ.ದಾಂಡಿಯಾ ಅಬ್ದುಲ್ ರಜಾಕ್ ಬೇಪಾರಿ, ಅಕ್ಬರಸಾಬ ಮಿರಜಕರ, ಅಮೀನಸಾಬ ರಕ್ಕಸಗಿ, ಮೆಹಬೂಬ ಮುದ್ದೇಬಿಹಾಳ, ಅಬ್ದುಲ್‌ಗಫರ್ ಕೊರ್ತಿ, ಮಹಾಬಳೇಶ ಗುಡಗುಂಟಿ, ರಾಮಕಿಶನ್ ಮುಂಡಾಸ, ಉಮೇಶ ಹಂಚಿನಾಳ, ರಮೇಶ ಬಂಡಿವಡ್ಡರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಉರುಳಿಗೆ ಸಿಲುಕಿದ್ದ ಚಿರತೆಯನ್ನು ಸುಟ್ಟ ಆರೋಪದಲ್ಲಿ ಮೂವರ ಬಂಧನ

ತುಮಕೂರು: ಕಾಡುಪ್ರಾಣಿಗಳಿಂದ ಬೆಳೆ ರಕ್ಷಣೆಗಾಗಿ ಜಮೀನಿನ ಸುತ್ತ ಅಳವಡಿಸಿದ್ದ ಉರುಳಿಗೆ ಸಿಲುಕಿದ್ದ ಚಿರತೆಯನ್ನು ಸುಟ್ಟ ಆರೋಪದ ಮೇಲೆ ಮೂವರನ್ನು ಅರಣ್ಯ ಇಲಾಖೆ ಅಧಿಕಾ-ರಿಗಳು ಬಂಧಿಸಿದ್ದಾರೆ. ತಾಲ್ಲೂಕಿನ ಗೌರಗೊಂಡನಹಳ್ಳಿ ಗ್ರಾಮದ ಜಿ.ಡಿ. ಶಿವಕುಮಾರ್, ನಾರಾಯಣಪ್ಪ ಹಾಗೂ ಚಂದ್ರಶೇಖರ್ ಬಂಧಿತರು. ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ.



ಗೌರಗೊಂಡನಹಳ್ಳಿ ಗ್ರಾಮದ ನಾರಾಯಣಪ್ಪ ಅವ-ರಿಗೆ ಬೆಟ್ಟದ ಬುಡದಲ್ಲಿ ಜಮೀನಿದ್ದು, ಅಲ್ಲಿ ರಾಗಿ ಬೆಳೆಯಲಾಗಿ-ತ್ತು. ಕಾಡುಹಂದಿ, ನವಿಲು ಹಾಗೂ ಚಿರತೆಗಳ ಹಾವಳಿಯಿಂದ ಬೆಳೆ ಪದೇಪದೇ ಹಾನಿಗೊಳಗಾಗುತ್ತಿದ್ದ ಹಿನ್ನೆಲೆಯಲ್ಲಿ ಉಳಿದ ಬೆಳೆಯನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದ ಜಮೀನಿನ ಸುತ್ತ ಉರುಳು ಅಳವಡಿಸಲಾಗಿತ್ತು ಎನ್ನಲಾಗಿದೆ. ಎರಡು ದಿನಗಳ ಹಿಂದೆ ಇದೇ ಉರುಳಿಗೆ ಚಿರತೆ ಸಿಲುಕಿಕೊಂಡಿತ್ತು. ವಿಷಯ ತಿಳಿದ ಆರೋಪಿಗಳು ಹಾಗೂ ಗ್ರಾಮದ ಕೆಲ ಯುವಕರು ನಿನ್ನೆ ಬೆಳಿಗ್ಗೆ ಸ್ಥಳಕ್ಕೆ ತೆರಳಿ ಚಿರತೆಯನ್ನು ಸುಟ್ಟಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಚಿರತೆಯನ್ನು ಸುಟ್ಟ ದೃಶ್ಯಗಳನ್ನು ಕೆಲವರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ವಾಟ್ಸ್‌ಆ?ಯಪ್ ಗ್ರೂಪ್‌ಗಳಲ್ಲಿ ಹಂಚಿಕೊಂಡಿದ್ದರು ಎನ್ನಲಾಗಿದೆ. ಈ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಪ್ರಕರಣದ ಮಾಹಿತಿ ಲಭಿಸಿದೆ. ಖಚಿತ ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದಾಗ ಚಿರತೆಯ ಸುಟ್ಟ ಅವಶೇಷಗಳು ಹಾಗೂ ಮಾಂಸ ಪತ್ತೆಯಾಗಿವೆ. ಸ್ಥಳದಲ್ಲಿದ್ದ ಸಾಕ್ಷ್ಯಾಧಾರಗಳನ್ನು ಅಧಿಕಾ-ರಿಗಳು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಬಂಧಿತ ಮೂವರನ್ನು ವಿಚಾರಣೆ ನಡೆಸಲಾಗುತ್ತಿದ್ದು, ಚಿರತೆ ಉರುಳಿಗೆ ಸಿಲುಕಿದ ಸಂದರ್ಭದಿಂದ ಅದನ್ನು ಸುಟ್ಟವರೆಗಿನ ಘಟನೆಯ ಕುರಿತು ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ. ಪ್ರಕರಣದಲ್ಲಿ ಇನ್ನೂ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬ ಬಗ್ಗೆಯೂ ತನಿಖೆ ಮುಂದುವರಿದಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಚಿರತೆ ಸೇರಿದಂತೆ ಸಂರಕ್ಷಿತ ವನ್ಯಜೀವಿಗಳನ್ನು ಬೇಟೆಯಾಡುವುದು, ಬಲೆಗೆ ಬೀಳಿಸುವುದು ಅಥವಾ ಅವುಗಳಿಗೆ ಹಾನಿ ಮಾಡುವುದು ಗಂಭೀರ ಅಪರಾಧವಾಗಿದೆ. ಬೆಳೆ ಹಾನಿ ಹಾಗೂ ಕಾಡುಪ್ರಾಣಿಗಳ ಹಾವಳಿ ಕಂಡುಬಂದಲ್ಲಿ ಕಾನೂನುಬಾಹಿರವಾಗಿ ಉರುಳು ಅಳವಡಿಸುವ ಬದಲು ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳು ಸ್ಥಳೀಯರಿಗೆ ಸೂಚಿಸಿದ್ದಾರೆ.

## ಬೆಂಗಳೂರಿನ ವಿವಿಧೆಡೆ ಆ.23ರಂದು ತುರ್ತು ವಿದ್ಯುತ್ ವ್ಯತ್ಯಯ




ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆಗಸ್ಟ್ 23ರಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಖೋಡೇಸ್ ಗ್ಲಾಸ್ ಫ್ಯಾಕ್ಟರಿ ವಿ.ವಿ. ಕೇಂದ್ರದ 66/11 ಕೆ.ವಿ. ಉಪಸ್ಥಾವರ ವ್ಯಾಪ್ತಿಯ ಅಂಜನಾಪುರ, ಅವಲಹಳ್ಳಿ, ರಾಘವನಪಾಳ್ಯ, ರಾಯಲ್ ಸಾರಥಿ ನಗರ, ನಾಗೇನಗೌಡಪಾಳ್ಯ, ಶೋಭಾ ಅಪಾರ್ಟ್‌ಮೆಂಟ್, ನಾರಾಯಣನಗರ 1 ಮತ್ತು 2ನೇ ಬ್ಲಾಕ್, ದೀಕ್ಷಾ ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಅಂಜನಾಪುರ ಉಪಸ್ಥಾವರದ ಕೆ-ಎಸ್‌ಐಟಿ ಕಾಲೇಜು, ಅಂಜನಾಪುರ, 8ನೇ ಬ್ಲಾಕ್, ವೀವರ್ಸ್ ಕಾಲೋನಿ, ಪೂರ್ವಾಂಕರ್ ಅಪಾರ್ಟ್‌ಮೆಂಟ್, ಅಮೃತನಗರ, ಎಸ್.ಪಿ. ತೋಟ, ವಡ್ಡರಪಾಳ್ಯ, ಕೆಂಬತ್ತಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಫಾರೆಸ್ಟ್ ವ್ಯೂ ಉಪಸ್ಥಾವರ ವ್ಯಾಪ್ತಿಯ ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಸೌದೇಲಾ ವಿ.ವಿ. ಕೇಂದ್ರ ಉಪಸ್ಥಾವರ ವ್ಯಾಪ್ತಿಯ ವಿಶ್ವಪ್ರಿಯ ಲೇಔಟ್, ಬೇಗೂರು-ಕೊಪ್ಪ ರಸ್ತೆ, ದೇವರಚಿಕ್ಕನಹಳ್ಳಿ, ಅಕ್ಷಯನಗರ, ತೇಜಸ್ವಿನಿ ನಗರ, ಹಿರಾನಂದಿನಿ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೂ ವಿದ್ಯುತ್ ವ್ಯತ್ಯಯವಾಗಲಿದೆ. ಬಿಟಿಎಂ ಲೇಔಟ್ ಉಪಸ್ಥಾವರ ವ್ಯಾಪ್ತಿಯ ಕಾವೇರಿ ನಗರ, ಹುಳಿಮಾವು, ಅಕ್ಷಯನಗರ, ಹೊಂಗಸಂದ್ರ, ಬಿ.ಟಿ. ಎಸ್. ಲೇಔಟ್, ಕೋಡಿಚಿಕ್ಕನಹಳ್ಳಿ, ವಿಜಯಾ ಬ್ಯಾಂಕ್ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಕಡಿತಗೊಳ್ಳಲಿದೆ ಎಂದು ತಿಳಿಸಲಾಗಿದೆ. ವಿದ್ಯುತ್ ವ್ಯತ್ಯಯದ ಅವಧಿಯಲ್ಲಿ ಗ್ರಾಹಕರು ಸಹಕರಿಸುವಂತೆ ಬೆಸ್ಕಾಂ ಮನವಿ ಮಾಡಿದೆ. ಯಾವುದೇ ದೂರು ಅಥವಾ ಮಾಹಿತಿಗಾಗಿ 1912 ಸಹಾಯವಾಣಿಗೆ ಕರೆ ಮಾಡಬಹುದು ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

# ಮನೆ ಮುಂದೆ ನಿಲ್ಲಿಸುವ ವಾಹನಕ್ಕೆ ವಿಧಿಸುವ ಶುಲ್ಕ ಕೈಬಿಡಲು ಆಗ್ರಹ

ಬೆಂಗಳೂರು: ದೇಶದ ಯಾವುದೇ ನಗರಗಳಲ್ಲಿ ಇಲ್ಲದ ಪಾರ್ಕಿಂಗ್ ಶುಲ್ಕವನ್ನು ಬೆಂಗಳೂರು ನಗರದಲ್ಲಿ ವಿಧಿಸಲು ಹೊರಟಿರುವುದನ್ನು ರಾಜ್ಯ ಸರ್ಕಾರ ಕೈಬಿಡಬೇಕು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೆಡಿಎಸ್ ಅಧ್ಯಕ್ಷ ಎಚ್.ಎಂ. ರಮೇಶ್‌ಗೌಡ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಮನೆ ಮುಂದೆ ನಿಲ್ಲಿಸುವ ವಾಹನಗಳಿಗೆ ಪಾರ್ಕಿಂಗ್ ಶುಲ್ಕ ವಿಧಿಸುವ ಜನವಿರೋಧಿ ನೀತಿಯನ್ನು ಕೈಬಿಡಬೇಕು. ಸರ್ಕಾರ ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಪಾರ್ಕಿಂಗ್ ಶುಲ್ಕ ವಿಧಿಸಲು ಮುಂದಾಗಿದ್ದು, ಈ ಕ್ರಮವನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಜೆ.ಸಿ. ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಿದ್ದ ಪಾರ್ಕಿಂಗ್ ಕಟ್ಟಡವನ್ನು ಖಾಸಗಿ ವ್ಯಕ್ತಿಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆ ನೀಡಲಾಗಿದೆ. ಅದನ್ನು ವಾಪಸ್ ಪಡೆದು ವಾಹನಗಳ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಬೇಕು. ಸರ್ಕಾರಿ



ಕಚೇರಿಗಳು, ಸರ್ಕಾರಿ ಆಸ್ಪತ್ರೆಗಳು, ಜಿಬಿಎ ಹಾಗೂ ಬಿಡಿಎ ಕಚೇರಿಗಳ ಬಳಿಯೇ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಮೊದಲು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಈ ಬಗ್ಗೆ ಸಾರ್ವಜನಿಕ ಚರ್ಚೆಗೂ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಿಗೆ ಚುನಾವಣೆ ನಡೆಸದೆ, ಮನೆ ಮುಂದೆ ನಿಲ್ಲಿಸುವ ವಾಹನಗಳಿಗೂ ಪಾರ್ಕಿಂಗ್ ಶುಲ್ಕ ವಿಧಿಸುವ ಕ್ರಮ ಸರಿಯಲ್ಲ. ಇದು ಜನರ ವಿಶ್ವಾಸ ಕಳೆದುಕೊಂಡಿರುವ ಸರ್ಕಾರವಾಗಿದೆ. ಈ ಸಂಬಂಧ ಜಿಬಿಎ ಮುಖ್ಯ ಆಯುಕ್ತರು, ಆಯುಕ್ತರುಗಳು ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ಪತ್ರ ಬರೆಯುವುದಾಗಿ ತಿಳಿಸಿದರು. ವಿಧಾನಪ-ರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, ಬೆಂಗಳೂರು ನಗರದಲ್ಲಿ ಚುನಾವಣೆ ನಡೆಸಲು ನಮ್ಮ ಪಕ್ಷ ಸಿದ್ಧವಿದೆ. ಆದರೆ ಒಂದಲ್ಲ ಒಂದು ನೆಪವೊಡ್ಡಿ ಸರ್ಕಾರ ಚುನಾವಣೆಯನ್ನು ಮುಂದೂಡುತ್ತಾ ಬಂದಿದೆ. ಬಿಬಿಎಂಪಿಯ ಹೆಸರನ್ನು ಬದಲಾಯಿಸಿರುವುದೇ ಸರ್ಕಾರದ ಸಾಧನೆ ಎಂದು ಟೀಕಿಸಿದರು.

ಬೆಂಗಳೂರು ನಗರದಲ್ಲಿ ಒಂದೂವರೆ ಕೋಟಿ ವಾಹನಗಳಿವೆ. ಫುಟ್‌ಪಾತ್ ತೆರವುಗೊಳಿಸಿರುವ ಸಣ್ಣಪುಟ್ಟ ವರ್ತಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಪಾರ್ಕಿಂಗ್ ವಿಚಾರದಲ್ಲಿ ದಂಡ ವಿಧಿಸಿ ಜನರಿಗೆ ತೊಂದರೆ ನೀಡಬಾರದು. ಈ ವಿಷಯವನ್ನು ಸದನದ ಒಳಗೂ ಹೊರಗೂ ಚರ್ಚಿಸಲಾಗುವುದು ಎಂದರು. ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುತ್ತಿಲ್ಲ, ಕಸವನ್ನೂ ತೆಗೆಯುತ್ತಿಲ್ಲ. ತರಾತುರಿಯಲ್ಲಿ ಪಾರ್ಕಿಂಗ್ ಶುಲ್ಕ ವಿಧಿಸುವ ಬದಲು ಸಾರ್ವಜನಿಕ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕರಾದ ಅಖಂಡ ಶ್ರೀನಿವಾಸಮೂರ್ತಿ, ವಿ. ಕೃಷ್ಣಪ್ಪ, ಪಕ್ಷದ ಮುಖಂಡರಾದ ತಿಮ್ಮೇಗೌಡ, ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ನಿಗೂಢ ನಾಪತ್ತೆ

ಬೆಂಗಳೂರು: ಕೆಪಿಎಸ್‌ಸಿ ಕರ್ಮಕಾಂಡದ ವಿಚಾರಣೆ ನಡೆಯುತ್ತಿರುವ ಬೆನ್ನಲ್ಲೇ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ನಿಗೂಢವಾಗಿ ನಾಪತ್ತೆಯಾಗಿರುವ ಪ್ರಕರಣ ಕುತೂಹಲ ಕೆರಳಿಸಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದ್ದ ಅವರು ಗುರುವಾರ ಬೆಳಗ್ಗೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದು, ಬಳಿಕ ಅವರ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ. ಜ್ಞಾನೇಂದ್ರ ಕುಮಾರ್ ಅವರು ದೆಹಲಿಗೆ ತೆರಳಲು ವಿಮಾನದ ಟಿಕೆಟ್ ಬುಕ್ ಮಾಡಿದ್ದರು ಎನ್ನಲಾಗಿದೆ.

ದೆಹಲಿಗೆ ತೆರಳುವುದಾಗಿ ತಿಳಿಸಿ ವಿಮಾನ ನಿಲ್ದಾಣಕ್ಕೆ ತೆರಳಿದ್ದ ಅವರು, ಅಲ್ಲಿಂದ ವಿಮಾನ ಏರಿ ದೆಹಲಿ ತಲುಪಿದ ಬಳಿಕ ನಿಗೂಢವಾಗಿ ನಾಪತ್ತೆಯಾಗಿದ್ದಾರೆ ಎನ್ನಲಾಗುತ್ತಿದೆ. ವಿಮಾನ ನಿಲ್ದಾಣದವರೆಗೆ ಅವರ ಚಲನವಲನವನ್ನು ಪೊಲೀಸರು ಟ್ರ್ಯಾಕ್ ಮಾಡಿದ್ದು, ಬಳಿಕ ಅವರ ಮೊಬೈಲ್ ಸಂಪರ್ಕ ಕಡಿತಗೊಂಡಿದೆ ಎಂದು ತಿಳಿದುಬಂದಿದೆ. ದೆಹಲಿ ತಲುಪಿದ ಬಳಿಕ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿರುವ ಹಿನ್ನೆಲೆಯಲ್ಲಿ ಪೊಲೀಸರು ಹಲವು ಸಾಧ್ಯತೆಗಳ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ. ಕುಟುಂಬದವರ ಸಂಪರ್ಕಕ್ಕೂ ಅವರು ಸಿಗದಿರುವುದು ಪ್ರಕರಣದ ಗಂಭೀರತೆಯನ್ನು ಹೆಚ್ಚಿಸಿದೆ. ಜ್ಞಾನೇಂದ್ರ ಕುಮಾರ್ ಅವರಿಗೆ ಈ ಹಿಂದೆ ಆರೋಗ್ಯ ಸಮಸ್ಯೆ ಇತ್ತು ಎಂಬ ಮಾಹಿತಿಯೂ ಲಭ್ಯವಾಗಿದೆ. ಸದ್ಯ ಅವರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿ-ಎಸ್‌ಸಿ) ಸೇವೆ ಸಲ್ಲಿಸಿದ್ದರು. ಹಿರಿಯ ಅಧಿಕಾರಿಗಳ ಮಾಹಿತಿ ಮೇರೆಗೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

**ಪ್ರಕರಣ ಗಂಭೀರ ಪರಿಗಣನೆ**

ಜ್ಞಾನೇಂದ್ರಕುಮಾರ್ ನಾಪತ್ತೆಯಾಗಿರುವ ಬಗ್ಗೆ ಹಿರಿಯ ಐಎಎಸ್ ಅಧಿಕಾರಿಯೊಬ್ಬರು ನನಗೆ ಮಾಹಿತಿ ನೀಡಿದ್ದಾರೆ. ಆದರೆ ಈ ಸಂಬಂಧ ಯಾವುದೇ ದೂರು ನೀಡಿಲ್ಲ. ಅಧಿಕಾರಿ ನಾಪತ್ತೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಅವರ ಚಲನವಲನದ ಕುರಿತು ಮಾಹಿತಿ ಕಲೆಹಾಕುತ್ತಿದ್ದೇವೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ವಿಮಾನ ನಿಲ್ದಾಣದಿಂದ ಅವರು ದೆಹಲಿಗೆ ತೆರಳಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪೊಲೀಸರು ಮುಂದಾಗಿದ್ದಾರೆ. ವಿಮಾನ ನಿಲ್ದಾಣದ



ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಗಳು ಸೇರಿದಂತೆ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದೆ. ಜ್ಞಾನೇಂದ್ರ ಕುಮಾರ್ ಅವರ ನಾಪತ್ತೆ ಪ್ರಕರಣವು ಇತ್ತೀಚೆಗೆ ಬೆಳಕಿಗೆ ಬಂದಿರುವ ಪಶುವೈದ್ಯಾಧಿಕಾರಿ ನೇಮಕಾತಿ ಪರೀಕ್ಷಾ ಅಕ್ರಮದ ಹಿನ್ನೆಲೆಯಲ್ಲಿ ಮತ್ತಷ್ಟು ಮಹತ್ವ ಪಡೆದುಕೊಂಡಿದೆ. ಪಶುವೈದ್ಯಾಧಿಕಾರಿ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿದ ಅಕ್ರಮದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದರು. ಈ ಪ್ರಕರಣದಲ್ಲಿ ಜ್ಞಾನೇಂದ್ರ ಕುಮಾರ್ ಅವರು ಈ ಹಿಂದೆ ಕೆಪಿಎಸ್‌ಸಿಯಲ್ಲಿ ಕಾರ್ಯನಿರ್ವಹಿಸಿದ್ದ ಅವಧಿಯಲ್ಲಿನ ಪಾತ್ರ ಸೇ-ರಿದಂತೆ ಹಲವು ಅಂಶಗಳನ್ನು ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ ಎನ್ನಲಾಗಿದೆ. ಇಡಿ ದಾಳಿ ನಡೆದ ಮರುದಿನವೇ ಅವರು ನಾಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

# ರಾಜ್ಯದಲ್ಲಿ ಕೃತಕ ಪನ್ನೀರ್ ನಿಷೇಧ

ಬೆಂಗಳೂರು: ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದ್ದು, ರಾಜ್ಯಾದ್ಯಂತ ಕೃತಕ ಅನಲಾಗ್ ಪನ್ನೀರ್ ತಯಾರಿಕೆ, ಸಂಗ್ರಹಣೆ ಹಾಗೂ ಮಾರಾಟಕ್ಕೆ ಒಂದು ವರ್ಷದ ಅವಧಿಗೆ ನಿಷೇಧ ಹೇರಿದೆ.

ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಈ ಸಂಬಂಧ ಆದೇಶ ಹೊರಡಿಸಿದ್ದು, ಹೋಟೆಲ್, ರೆಸ್ಟೋರೆಂಟ್‌ಗಳು ಹಾಗೂ ಇತರ ಆಹಾರ ಸಂಸ್ಥೆಗಳಲ್ಲಿ ಕೃತಕ ಪನ್ನೀರ್ ಬಳಕೆಗೆ ಕಡಿವಾಣ ಹಾಕಲು ಮುಂದಾಗಿದೆ. ಅಸಲಿ ಪನ್ನೀರ್ ಅನ್ನು ಹಾಲು ಹಾಗೂ ಹಾಲಿನ ಉತ್ಪನ್ನಗಳಿಂದ ತಯಾರಿಸಲಾಗುತ್ತದೆ. ಆದರೆ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿ ಲಾಭ ಗಳಿಸುವ ಉದ್ದೇಶದಿಂದ ಕೆಲವೆಡೆ ಹಾಲಿನ ಬದಲು ಸಸ್ಯಜನ್ಯ ಎಣ್ಣೆ, ಪಿಷ್ಟ ಸೇರಿದಂತೆ ಇತರ ಪದಾರ್ಥಗಳನ್ನು ಬಳಸಿ ಅನಲಾಗ್ ಪನ್ನೀರ್ ತಯಾರಿಸಿ, ಅದನ್ನೇ ಪನ್ನೀರ್ ಹೆಸರಿನಲ್ಲಿ ಗ್ರಾಹಕರಿಗೆ ನೀಡುತ್ತಿರುವುದು ಆಹಾರ ಸುರಕ್ಷತಾ ಇಲಾಖೆಯ ಗಮನಕ್ಕೆ ಬಂದಿದೆ.

**ಏನಿದು ಅನಲಾಗ್ ಪನ್ನೀರ್?**

ಸಾಮಾನ್ಯ ಪನ್ನೀರ್‌ಗಿಂತ ಕಡಿಮೆ ವೆಚ್ಚದಲ್ಲಿ ತಯಾರಾಗುವ ಅನಲಾಗ್ ಪನ್ನೀರ್‌ನಲ್ಲಿ ಹಾಲಿನ ಕೊಬ್ಬಿನ ಬದಲಿಗೆ ಇತರೆ ಕೊಬ್ಬು ಅಥವಾ ಸಸ್ಯಜನ್ಯ ಎಣ್ಣೆಗಳನ್ನು ಬಳಸಲಾಗುತ್ತದೆ. ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗುವುದರಿಂದ ಕೆಲವು ಆಹಾರ ಸಂಸ್ಥೆಗಳು ಇಂತಹ ಉತ್ಪನ್ನಗಳತ್ತ ಮುಖ ಮಾಡುತ್ತಿರುವ ಆರೋಪಗಳಿವೆ. ಹಾಲಿನಿಂದ ತಯಾರಿಸದ ಉತ್ಪನ್ನವನ್ನು ಪನ್ನೀರ್ ಎಂಬ ಹೆಸರಿನಲ್ಲಿ ಮಾರಾಟ ಮಾಡುವುದು ಗ್ರಾಹಕರಿಗೆ



ತಪ್ಪು ಮಾಹಿತಿ ನೀಡಿದಂತಾಗಬಹುದು. ಇದೇ ಹಿನ್ನೆಲೆಯಲ್ಲಿ ಆಹಾರ ಸುರಕ್ಷತಾ ಇಲಾಖೆ ಕೃತಕ ಪನ್ನೀರ್ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದೆ. ಇನ್ನು ಮುಂದೆ ಪನ್ನೀರ್ ಬಳಸುವ ಹೋಟೆಲ್ ರೆಸ್ಟೋರೆಂಟ್‌ಗಳು ಹಾಗೂ ಆಹಾರ ಸಂಸ್ಥೆಗಳು ಗುಣಮಟ್ಟದ ಹಾಗೂ ನಿಗದಿತ ಮಾನದಂಡಗಳಿಗೆ ಅನುಗುಣವಾದ ಪನ್ನೀರ್‌ನ್ನೇ ಬಳಸಬೇಕಾಗಿದೆ. ಕೃತಕ ಅನಲಾಗ್ ಪನ್ನೀರ್ ತಯಾರಿಸುವುದು, ಸಂಗ್ರಹಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದರೆ ಆಹಾರ ಸುರಕ್ಷತಾ ಕಾನೂನುಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವುದಾಗಿ ಇಲಾಖೆ ಎಚ್ಚ-ರಿಕೆ ನೀಡಿದೆ. ರಾಜ್ಯಾದ್ಯಂತ ಆಹಾರ ಸುರಕ್ಷತಾ ಅಧಿಕಾರಿಗಳು ಹೋಟೆಲ್, ರೆಸ್ಟೋರೆಂಟ್, ಡೇರಿ ಹಾಗೂ ಇತರ ಆಹಾರ ಸಂಸ್ಥೆಗಳ ಮೇಲೆ ತಪಾಸಣೆ ನಡೆಸುವ ಸಾಧ್ಯತೆಯಿದೆ. ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸುವ ಮೂಲಕ ಉತ್ಪನ್ನದ ಗುಣಮಟ್ಟ ಪರಿಶೀಲಿಸಲು ಇಲಾಖೆ ಮುಂದಾಗಲಿದೆ.

**ಗ್ರಾಹಕರ ಆರೋಗ್ಯದ ಮೇಲೆ ನಿಗಾ**

ಕೃತಕ ಪನ್ನೀರ್‌ನಲ್ಲಿ ಬಳಸುವ ಪದಾರ್ಥಗಳ ಗುಣಮಟ್ಟ ಮತ್ತು ಸುರಕ್ಷತೆ ಪ್ರಮುಖ ಪ್ರಶ್ನೆಯಾಗಿದೆ. ಮಾನದಂಡಗಳಿಗೆ ಅನುಗುಣವಾಗಿರದ ಕೊಬ್ಬು, ಪಿಷ್ಟ ಅಥವಾ ಇತರ ಪದಾರ್ಥಗಳನ್ನು ಬಳಸಿದ ಉತ್ಪನ್ನಗಳ ಸೇವನೆಯಿಂದ ಗ್ರಾಹಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಆಹಾರ ಸುರಕ್ಷತಾ ಇಲಾಖೆ ಮುನ್ನೆಚ್ಚರಿಕೆಯ ಕ್ರಮ ಕೈಗೊಂಡಿದೆ. ಆದ-'ರೆ ಅನಲಾಗ್ ಪನ್ನೀರ್ ಎಂದರೆ ಪ್ರತಿಯೊಂದು ಉತ್ಪನ್ನವೂ ವಿಷಕಾರಿ ಅಥವಾ ತಕ್ಷಣವೇ ಆರೋಗ್ಯಕ್ಕೆ ಅಪಾಯಕಾರಿ ಎಂದರ್ಥವಲ್ಲ. ಉತ್ಪನ್ನದಲ್ಲಿ ಬಳಸಿರುವ ಪದಾರ್ಥಗಳು, ಅವುಗಳ ಗುಣಮಟ್ಟ ಹಾಗೂ ಸಂಬಂಧಿತ ಆಹಾರ ಸುರಕ್ಷತಾ ಮಾನದಂಡಗಳನ್ನು ಪಾಲಿಸಲಾಗಿದೆಯೇ ಎಂಬುದೇ ಮುಖ್ಯ. ಹೀಗಾಗಿ ಇಲಾಖೆಯ ಪರೀಕ್ಷೆ ಮತ್ತು ಜಾರಿ ಕ್ರಮಗಳು ಮಹತ್ವ ಪಡೆಯುತ್ತವೆ.

**ಒಂದು ವರ್ಷದ ನಿಷೇಧಕ್ಕೆ ಕಾರಣವೇನು**

ರಾಜ್ಯದಲ್ಲಿ ಪನ್ನೀರ್ ಹೆಸರಿನಲ್ಲಿ ಕೃತಕ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ ಮತ್ತು ಮಾರಾಟ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಗುಣಮಟ್ಟದ ಹಾಲಿನ ಉತ್ಪನ್ನ ದೊರೆಯುವಂತೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಒಂದು ವರ್ಷದ ನಿಷೇಧ ಅವಧಿಯಲ್ಲಿ ಮಾರುಕಟ್ಟೆಯಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸುವುದು, ಕೃತಕ ಉತ್ಪನ್ನಗಳ ಪೂರೈಕೆ ಸರಪಳಿಯನ್ನು ಪತ್ತೆಹಚ್ಚುವುದು ಹಾಗೂ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳುವುದು ಇಲಾಖೆಯ ಪ್ರಮುಖ ಉದ್ದೇಶವಾಗಿದೆ.

ಒಟ್ಟಿನಲ್ಲಿ, ಕರ್ನಾಟಕದಲ್ಲಿ ಕೃತಕ ಅನಲಾಗ್ ಪನ್ನೀರ್‌ಗೆ ಒಂದು ವರ್ಷದ ನಿಷೇಧವು ಗ್ರಾಹಕರ ಆರೋಗ್ಯ ಹಾಗೂ ಆಹಾರ ಗುಣಮಟ್ಟದ ದೃಷ್ಟಿಯಿಂದ ಮಹತ್ವದ ಬೆಳವಣಿಗೆಯಾಗಿದೆ. ಆದರೆ ಆದೇಶ ಪರಿಣಾಮಕಾರಿಯಾಗಿ ಜಾ-ರಿಯಾಗಬೇಕಾದರೆ ರಾಜ್ಯಾದ್ಯಂತ ನಿಯಮಿತ ತಪಾಸಣೆ, ಮಾದರಿ ಪರೀಕ್ಷೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಹಾಗೂ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವೂ ಅಗತ್ಯವಾಗಿದೆ.

# ತೆಲಂಗಾಣ ಕಂದಾಯ ಅಧಿಕಾರಿಯ ಮೇಲೆ ಎಸಿಬಿ ದಾಳಿ : 6.87 ಕೋಟಿ ರೂ. ಆಸ್ತಿ ಪತ್ತೆ

ಹೈದರಾಬಾದ್: ತೆಲಂಗಾಣ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ವು 6.87 ಕೋಟಿ ರೂ. ಗಳಿಗೂ ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದ್ದ ಕಂದಾಯ ಅಧಿಕಾರಿಯ ವಿರುದ್ಧ ಅಕ್ರಮ ಆಸ್ತಿ ಪ್ರಕರಣ ದಾಖಲಿಸಿದೆ. ಕಂದಾಯ ಅಧಿಕಾರಿಯನ್ನು ದೇಶಾನಿ ಶ್ರೀನಿವಾಸ್ ರೆಡ್ಡಿ ಎಂದು ಗುರುತಿಸಲಾಗಿದೆ, ಪ್ರಸ್ತುತ ಇವರು ರಂಗಾರೆಡ್ಡಿ ಜಿಲ್ಲೆಯ ಇಬ್ರಾಹಿಂಪಟ್ಟಣಂನಲ್ಲಿ ವಿಭಾಗೀಯ ಆಡಳಿತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆಗಸ್ಟ್ 20ರಂದು ರೆಡ್ಡಿ ಅವರ ನಿವಾಸ, ಕಚೇರಿ ಮತ್ತು ಇತರ ಐದು ಸ್ಥಳಗಳಲ್ಲಿ ಎಸಿಬಿ ಶೋಧ ನಡೆಸಿತ್ತು. ಶೋಧ ಕಾರ್ಯಾಚರಣೆ ವೇಳೆ 2.63 ಕೋಟಿ ರೂ. ಮೌಲ್ಯದ ಎರಡು ವಸತಿ ಫ್ಲಾಟ್‌ಗಳು, 1.61 ಕೋಟಿ ರೂ. ಮೌಲ್ಯದ ನೆಲ ಮತ್ತು ಮೂರು ಮಹಡಿಗಳ ಪೆಂಟ್‌ಹೌಸ್, 10 ಎಕರೆ ಕೃಷಿ ಭೂಮಿ ಮತ್ತು ಹೈದರಾಬಾದ್ ಮತ್ತು ಅದರ ಹೊರವಲಯದ ವಿವಿಧ ಭಾಗಗಳಲ್ಲಿ ಎಂಟು ತೆರೆದ ಪ್ಲಾಟ್‌ಗಳಿಗೆ ಸಂಬಂಧಿಸಿದ ದಾಖಲೆಗಳು ಕಂಡುಬಂದಿವೆ. ಈ ಆಸ್ತಿಗಳ ಜೊತೆಗೆ, ರೆಡ್ಡಿ ಬಾರ್ ಮತ್ತು ರೆಸ್ಟೋರೆಂಟ್‌ನಲ್ಲಿ 86 ಲಕ್ಷ ರೂ.ಗಳನ್ನು ತಮ ಪಾಲಿನ ರೂಪದಲ್ಲಿ ಹೂಡಿಕೆ ಮಾಡಿದ್ದಾರೆ ಎಂಬುದು ಗೊತ್ತಾಗಿದೆ. 4 ಲಕ್ಷ ರೂ. ನಗದು, ಬ್ಯಾಂಕ್ ಠೇವಣಿ, 680 ಗ್ರಾಂ ಚಿನ್ನ, ಮೂರು ಕಾರುಗಳು, ಎರಡು ದ್ವಿಚಕ್ರ ವಾಹನಗಳು ಮತ್ತು ವಿವಿಧ ಗೃಹೋಪಯೋಗಿ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಆಸ್ತಿಗಳ ಅಧಿಕೃತ ಮೌಲ್ಯ 6.87 ಕೋಟಿ ರೂ.ಗಳಾಗಿದ್ದರೂ, ಸ್ಥಿರ ಆಸ್ತಿಗಳ ಮಾರುಕಟ್ಟೆ ಸುಮಾರು 50 ಕೋಟಿ ರೂ. ಗಳೆಂದು ಅಂದಾಜಿಸಲಾಗಿದೆ. ಕಂದಾಯ





ಅಧಿಕಾರಿಯು ಈ ಆಸ್ತಿಗಳನ್ನು ಭ್ರಷ್ಟಾಚಾರದ ಮೂಲಕ ಗಳಿಸಿದ್ದಾರೆ ಮತ್ತು ಅವು ಅವರ ತಿಳಿದಿರುವ ಆದಾಯದ ಮೂಲಗಳನ್ನು ಮೀರಿವೆ. ರೆಡ್ಡಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕಾಗಿ ವಿಶೇಷ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರೆಡ್ಡಿ ವಿರುದ್ಧ ಇದು ಮೊದಲ ಅಕ್ರಮ ಆಸ್ತಿ ಪ್ರಕರಣವಲ್ಲ. 2009 ರ ಡಿಸೆಂಬರ್‌ನಲ್ಲಿ ಅವರು ಮಂಡಲ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದಾಗ ಎಸಿಬಿ ಅವರ ವಿರುದ್ಧ ಇದೇ ರೀತಿಯ ಪ್ರಕರಣವನ್ನು ದಾಖಲಿಸಿತ್ತು.

# ಅದ್ಭುತ ಸೃಷ್ಟಿ ಸೌಂದರ್ಯದ ಗಿರಿ ಶಿಖರ.., ಮುಳ್ಳಯ್ಯನಗಿರಿ

ಚಿಕ್ಕಮಗಳೂರಿನ ಪುಟ್ಟ ರೆಸಾರ್ಟ್ ನಲ್ಲಿ ತಂಗಿದ್ದ ನಾವು ಆ ದಿನ ಮುಂಜಾನೆ ಎಂಟು ಗಂಟೆಯ ಸುಮಾರಿಗೆ ನಿತ್ಯ ಕರ್ಮಗಳನ್ನು ಪೂರೈಸಿ ಹೊಟ್ಟೆ ತುಂಬಾ ತಿಂಡಿ ತಿಂದು ಮಾರುಕಟ್ಟೆಯಲ್ಲಿ ಒಂದೆರಡು ಛತ್ರಿಗಳನ್ನು ಹಾಗೂ ಅಲ್ಲಿಯ ವಿಶಿಷ್ಟ ಡ್ರೈ ಫ್ರೂಟ್ಸ್ ಗಳನ್ನು, ಕಾಫಿ ಪುಡಿಯನ್ನು ಖರೀದಿಸಿ ಗಾಡಿಯ ಡಿಕ್ಕಿಯಲ್ಲಿರಿಸಿದೆವು . ನಂತರ ನಮ್ಮ ಪಯಣ ಮುಳಯ್ಯನ ಗಿರಿಯತ್ತ..

ಚಿಕ್ಕಮಗಳೂರಿನಿಂದ ಸರಿಸುಮಾರು 16 ಕಿ.ಮೀ ದೂರದಲ್ಲಿರುವ ಮುಳ್ಳಯ್ಯನಗಿರಿ ಪರ್ವತವು ಕರ್ನಾಟಕದಲ್ಲಿಯೇ ಅತಿ ಎತ್ತರದ ಶಿಖರವಾಗಿದೆ. ಅತ್ಯಂತ ಕಡಿದಾದ ತಿರುವುಗಳನ್ನು ಹೊಂದಿರುವ ಆಳವಾದ ಕಣಿವೆಗಳು ಒಂದೆಡೆ ಎದೆ ಝಲ್ಲೆನಿಸಿದರೆ ಮತ್ತೊಂದೆಡೆ ಮುಗಿಲನ್ನು ಚುಂಬಿಸುವಂತಹ ಶಿಖರಗಳು ನಮ್ಮ ಕಣ್ಸೆಳೆಯುತ್ತವೆ. ಜುಲೈ 7 ರ ಆ ದಿನ ತುಸು ಮಳೆಯ ಹನಿಯುತ್ತಿತ್ತು. ಸರಿಸುಮಾರು ಮೂರುವರೆ ಸಾವಿರ ಮೀಟರ್ ಎತ್ತರವನ್ನು ಕಡಿದಾದ ತಿರುವುಗಳನ್ನು ಹೊಂದಿದ ಮಾರ್ಗದಲ್ಲಿ.ನಾವು ನಮ್ಮದೇ ಕಾರಿನಲ್ಲಿ ಪ್ರಯಾಣ ಬೆಳೆಸಿದೆವು. ಅಂತಿಮವಾಗಿ ಸಾಕಷ್ಟು ವಾಹನಗಳನ್ನು ನಿಲುಗಡೆ ಮಾಡಿದ ಸ್ಥಳದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದ ನಾವು ಕೆಳಗಿಳಿದರೆ ತಣ್ಣಗೆ ಮಳೆ ಜನ ಗೊತ್ತಿತ್ತು ಕೇವಲ ಹತ್ತು ಅಡಿ ದೂರದಲ್ಲಿರುವ ಜನರು ನಮಗೆ ಕಾಣುತ್ತಿರಲಿಲ್ಲ. ಆದರೂ ನೂರಾರು ಸಂಖ್ಯೆಯಲ್ಲಿ ವಾಹನಗಳು ಅಲ್ಲಿ ನಿಂತಿದ್ದವು ಅಲ್ಲಿಯೇ ಇದ್ದ ದೊಡ್ಡದಾದ ಪಾರ್ವತಿ ಪರಮೇಶ್ವರ ಮೂರ್ತಿ ಹಾಗೂ ಒಳಗಿರುವ ಪುಟ್ಟ ದೇಗುಲವನ್ನು ಇಪ್ಪತ್ತು ಅಡಿ ದೂರದಿಂದಲೇ ನೋಡಿ ಕೈ ಮುಗಿದ ನಾವು ನಿಧಾನವಾಗಿ ಒಂದೆಡೆ ಏರಲು ಆರಂಭಿಸಿದೆವು.

ತುಸು ದೂರ ಎತ್ತರದ ಪ್ರದೇಶವೊಂದರಲ್ಲಿ ನಡೆದು ಮುಂದೆ ಸಾಗಿದಾಗ ಅಗಾಧವಾದ ಬಯಲು ಗೋಚರವಾಯಿತು. ಅಲ್ಲಿಯೇ ಇದ್ದ ಜೀಪ್ ಚಾಲಕ ಇನ್ನೂರು ರೂಪಾಯಿಗೆ ಮೂರು ಜನರನ್ನು ಕರೆದುಕೊಂಡು ಇನ್ನಷ್ಟು ದೂರದ ಎತ್ತರಕ್ಕೆ ಕರೆದೊಯ್ದ. ಅಲ್ಲಿನ ವಿಶಾಲವಾದ ಅಂಗಳದಲ್ಲಿ ಓಡಾಡಿ ಫೋಟೋಗೆ ಫೋಸ್ ಕೊಟ್ಟ. ನಮಗೆ ಅಲ್ಲಿ ಕೆಂಡದಲ್ಲಿ ಸುಡುತ್ತಿದ್ದ ಮೆಕ್ಕೆಜೋಳದ ತೆನೆಗಳನ್ನು ಕಂಡು ಹಸಿವು ಕಾಣಿಸಿತು. ಕೂಡಲೇ ಎರಡು ಮೆಕ್ಕೆಜೋಳದ ತೆನೆಗಳನ್ನು ಸುಡಿಸಿಕೊಂಡು ತಣ್ಣಗಿನ ಆರ್ದ್ರ ಹವೆಯಲ್ಲಿ ಅದನ್ನು ತಿನ್ನುತ್ತಿದ್ದರೆ ಹಬ್ಬ. ಸ್ವರ್ಗಕ್ಕೆ ಕಿಚ್ಚು ಹಚ್ಚಬೇಕು ಎನ್ನುವಂತಹ ಅನುಭವ. ಅಲ್ಲಿ ಮ್ಯಾಗಿ, ಬ್ರೆಡ್ ಟೋಸ್ಟ್, ಆಮ್ಲೆಟ್ ಗಳು ಚಹಾ, ಕಾಫಿ ಅಂಗಡಿಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದವು ಮಳೆಗೆ ಇರಲು ಕಡಿಮೆ ಗುಣಮಟ್ಟದ ಬಳಸಿ ಬಿಸಾಡುವ ರೇನ್ ಕೋರ್ಟ್ ಗಳು ಕೂಡ ಲಭ್ಯವಿದ್ದವು ಸಾಕಷ್ಟು ಜನ ಅಲ್ಲಿಯೇ ಅವುಗಳನ್ನು ಖರೀದಿಸಿ ಧರಿಸುತ್ತಿದ್ದರು. ಎತ್ತರದ ಭಾಗದಲ್ಲಿ ಒಂದಷ್ಟು ಓಡಾಡಿ ನಮ್ಮ ಕಾರಿನತ್ತ ಬಂದ ನಾವು ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ಇಲ್ಲಿಯವರೆಗೂ ನಾವು ಬಂದ ಪರ್ವತಕ್ಕೆ ಸಂಪೂರ್ಣ ವಿರುದ್ಧವಾದ ಮತ್ತೊಂದು ಭಾಗದಲ್ಲಿ ನಮ್ಮ ವಾಹನ ಚಲಿಸುತ್ತಿತ್ತು ಎದುರಿಗೆ ಕಾಣುತ್ತಿದ್ದ ತಿರುವುಗಳನ್ನು ಕಂಡು ಎದೆ ಝಲ್ಲೆನ್ನುತ್ತಿತ್ತು ಬಹುಶಹ ಎತ್ತರಕ್ಕೆ ಹೋದಂತೆ ಆಳವಾದ ಕಣಿವೆಯ ಭಾಗದಲ್ಲಿ



ಮಂಜು ಮುಸುಕುತ್ತಿದ್ದ ಕಾರಣ ನಮಗೆ ಕೆಳಗಿನ ದೃಶ್ಯಗಳು ಅಷ್ಟೊಂದು ಗೋಚರವಾಗುತ್ತಿರಲಿಲ್ಲ. ಮೂರುವರೆ ಸಾವಿರ ಅಡಿ ಎತ್ತರ ತಲುಪಿದಾಗ ಅಲ್ಲಿ ನೂರಾರು ಸಂಖ್ಯೆಯಲ್ಲಿ ಜೀಪುಗಳು ಗ್ರಾಹಕರ ನಿರೀಕ್ಷೆಯಲ್ಲಿ ಪಾಳಿಯಲ್ಲಿ ಕಾಯುತ್ತಿದ್ದವು. ತುಸು ಒತ್ತಾಯಪೂರ್ವಕವಾಗಿಯೇ ಅವರು ನಮಗೆ ತಮ್ಮ ಜೀಪನ್ನು ಏರಲು ಹೇಳಿದರು ಎನ್ನಬಹುದು. ಬಾಡಿಗೆ ಮಾತನಾಡಿ ನಾವು ಮೂರು ಜನ ನಾವು ಕರೆದೊಯ್ದ ಡ್ರೈವರ್ ಜೊತೆ ಅವರ ಜೀಪನ್ನು ಏರಿದೆವು. ಒಂದೇ ಸಮನೆ ರಾಚುತ್ತಿದ್ದ ಮಳೆ ನಾವು ಧರಿಸಿದ್ದ ರೇನಕೋಟನ್ನು ದಾಟಿ ನಮ್ಮ ಮೈಯನ್ನು ತಾಕುತ್ತಿದ್ದರೆ, ಭರ್ ಎಂಬ ಗಾಳಿ ದೇಹದಲ್ಲಿ ತಣ್ಣಗಿನ ನಡುಕುವನ್ನು ಹುಟ್ಟಿಸುತ್ತಿತ್ತು. ಹಿಮಾಲಯವನ್ನು ಏರುವಾಗ ಆಕ್ಸಿಜನ್ ಕೊರತೆಯಿಂದ ಉಸಿರಾಟದ ತೊಂದರೆ ಯಾಗುವುದು ಎಂದು ಕೇಳಿದ್ದವು... ಆದರೆ ಇಲ್ಲಿ ಮಾತ್ರ ಅಂತಹ ಯಾವುದೇ ತೊಂದರೆ ನಮಗಾಗಲಿಲ್ಲ. ಬಾಬಾಬುಡನ ಗಿರಿಯ ಶೂಟಿಂಗ್ ಪಾಯಿಂಟ್ ಹಾಗೂ ಬಾಬಾ ಬುಡನ್ ಹಾಗೂ ಆತನ ಸಹಚರರ ಸಮಾಧಿಗಳು ಇರುವ ಸ್ಥಳ, ಜರಿ ಫಾಲ್ಸ್, ಚಲನಚಿತ್ರಗಳ ಶೂಟಿಂಗ್ ಸ್ಪಾಟ್ ಹಾಗೂ ಫೋಟೋ ತೆಗೆಯುವ ಸ್ಥಳ ಹಾಗೂ ಮಾಣಿಕ್ಯಧಾರ ಫಾಲ್ಸ್ ಗಳನ್ನು ನಾವು ನೋಡಬೇಕಿತ್ತು. ಅಂತಿಮವಾಗಿ ಮುಳ್ಳಯ್ಯನಗಿರಿ ಪೀಕ್ ನೋಡಬೇಕಿತ್ತು.

ಸರಿ ಸುಮಾರು 2 ಸಾವಿರ ಮೀಟರ್ ಎತ್ತರದ ವಿವಿಧ ಹಂತಗಳಲ್ಲಿ ಈ ಸ್ಥಳಗಳನ್ನು ತೋರಿಸಲು ಬಂದ ಜೀಪ್ ಡ್ರೈವರ್ ಅತ್ಯಂತ ಚಾಕಚಕ್ಯತೆಯಿಂದ ವಾಹನವನ್ನು ಚಲಾಯಿಸುತ್ತಿದ್ದ. ವಾಹನ ಚಲಾಯಿಸುವಾಗ ಕಂಡುಬರುತ್ತಿದ್ದ ಆಳವಾದ ತಗ್ಗು-ದಿಣ್ಣೆಗಳು ಕೊರಕಲು ರಸ್ತೆಗಳು ವಾಹನಕ್ಕೆ ತಾಕಿಯೇ ಬಿಡುತ್ತದೆ ಎಂಬಂತಹ ರಸ್ತೆಯ ತಿರುವುಗಳನ್ನು ನೋಡಿದಾಗ ಬಹುಶಹ ಅದೆಷ್ಟೇ ನುರಿತ ಡ್ರೈವರ್ ಆದರೂ ಕೂಡ ಅಂತಹ ರಸ್ತೆಯಲ್ಲಿ ವಾಹನ ಚಲಾಯಿಸಲು ಎಂಟಿದೆ ಬೇಕು ಎಂಬ ಭಾವ ನಮ್ಮನ್ನು ಸುತ್ತಿ ಸುಳಿದು ಯೋಚಿಸಲು ಒತ್ತಾಯಿಸುತ್ತಿತ್ತು. ಸಮತಟ್ಟಾದ ಜಾಗವೊಂದರ ಬಳಿ ವಾಹನವನ್ನು ನಿಲ್ಲಿಸಿದ ಆತ ಅದನ್ನು ತೋರಿಸಿ ಇಲ್ಲಿಯೇ ಎಲ್ಲ ಚಲನಚಿತ್ರಗಳ ಶೂಟಿಂಗ್ ನಡೆಯುವುದು ಎಂದು ಹೇಳಿದ. ತುಸು ಹೆಚ್ಚೇ ಅಗಲವಾದ ಆ ಬಯಲು ಪ್ರದೇಶದಲ್ಲಿ ಮಂಜು ಮುಸುಕಿದ್ದರೂ ಕೂಡ ಸಾಕಷ್ಟು ಪ್ರವಾಸಿಗರು ಆರಾಮಾಗಿ ಓಡಾಡಿ ಅಲ್ಲಲ್ಲಿ ನಿಂತು ಕುಳಿತು ವಿವಿಧ ಭಂಗಿಗಳಲ್ಲಿ ಫೋಟೋ ಶೂಟ್ ಮಾಡುತ್ತಿದ್ದರು. ಸಮತಟ್ಟಾದ ಪ್ರದೇಶದ ಅಂಚಿನ ಬಳಿ ಹೋಗಿ ನೋಡಿದರೆ ಹಚ್ಚ ಹಸಿರಿನಿಂದ ಕೂಡಿದ ಆಳವಾದ ಕಣಿವೆ ಪ್ರದೇಶ. ತಲೆಯ ಮೇಲೆ ಮೋಡಗಳು ನಮ್ಮನ್ನು ತಾಕಿ ಹೋಗುತ್ತಿದ್ದರೆ ಬೆಳ್ಳಗಿನ ಆ ಮೋಡಗಳನ್ನು ಕೈಯಿಂದ ಮುಟ್ಟಿ ಅನುಭವಿಸುವ ಅನುಭೂತಿ ದಿವ್ಯವಾಗಿತ್ತು.ನಾವು ಕೂಡ ಅಲ್ಲಿ ಕೆಲ ಹೊತ್ತು ಸುತ್ತಾಡಿ ಮತ್ತೆ ಜೀಪಿಗೆ ಬಂದು ಕುಳಿತರೆ ನಮ್ಮ ಪಯಣ ಬಾಬಾ ಬುಡನ್ ಗಿರಿಯ ದತ್ತ ಪೀಠದತ್ತ ಸಾಗಿತು. ಶತಮಾನಗಳ ಹಿಂದೆ ಕೊರೆದಿರುವ ಕಡಿದಾದ ಗವಿಗಳಲ್ಲಿ ಮುಸ್ಲಿಂ ಸಂತರ ಸಮಾಧಿಗಳು ಒಂದೆಡೆ ಇದ್ದರೆ ಮತ್ತೊಂದು ಕಡೆ ದತ್ತನ ಪೀಠವು ಸ್ಥಿತವಾಗಿದೆ. ಎರಡು ವಿಭಿನ್ನ ಧರ್ಮಗಳ ದೈವಗಳು ಅಲ್ಲಿ ಗವಿಯ ಪ್ರಶಾಂತ ವಾತಾವರಣದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದರೆ, ಆ ಸ್ಥಳದ ಹಕ್ಕು ಸ್ವಾಮ್ಯ ನನ್ನದು ಎಂದು ಎರಡು ಧರ್ಮಗಳ ಜನರು ಅವರ ಜಗತ್ತಿನಲ್ಲಿ ಹೊಡೆದಾಡಿಕೊಂಡಿರುವುದು ವಿಪರ್ಯಾಸ. ಮೊಬೈಲ್ ಫೋನ್ ಗಳನ್ನು ಜೀಪ್ನಲ್ಲಿಯೇ ಬಿಟ್ಟು ಪ್ರವೇಶ ದ್ವಾರದ ಬಳಿ ತಪಾಸಣೆ ಹೊಂದಿ ಕಬ್ಬಿಣದ ಜಾಲರಿಗಳ ನಡುವೆ ಹಾಯ್ದು ಗವಿಯ ಒಳಗೆ ಇಳಿದರೆ ಗೋಡೆಗಳಲ್ಲ ಗಂಧದ ಸುವಾಸನೆಯಿಂದ ಕೂಡಿವೆ. ತಂಪಾದ ವಾತಾವರಣದಲ್ಲಿ ಗೋಡೆಗೆ ಕೈ ಆನಿಸಿ ಕೆಳಗೆ ಇಳಿಯುವಾಗ ಗಂಧ ಕೈಗೆ ಮೆತ್ತುತ್ತದೆ. ಹಾಗೆಯೇ ಅದನ್ನು ಕೈಗಳಿಗೆ ಸವರಿಕೊಂಡು ಮುಂದೆ ಸಾಗಿದರೆ ದೇದೀಪ್ಯಮಾನವಾದ ಬೆಳಕಿನ ನಡುವೆ ಪ್ರಶಾಂತ ವಾತಾವರಣದಲ್ಲಿ ದತ್ತಪೀಠದ ದರ್ಶನ ಪಡೆದು ಪಕ್ಕಕ್ಕೆ ಹೊರಳಿದರೆ ಅಲ್ಲಿಯೇ ಸಾಲಾಗಿ ಐದಾರು ಸಮಾಧಿಗಳು ಇದೆ. ಎರಡೂ ಧರ್ಮದ ವಿಧಿ ವಿಧಾನಗಳ ಪ್ರಕಾರ ದೈನಂದಿನ ಪೂಜೆಗಳು ನಡೆಯುತ್ತವೆ. ಅಲ್ಲಿಂದ ಹೊರಗೆ ಬಂದರೆ ನಿರಾಳವಾದ ಭಾವ. ಬಹುಶಹ ಪತ್ರಿಕೆಗಳಲ್ಲಿ ಈ ದತ್ತಪೀಠ ಹಾಗೂ ಸಮಾಧಿಗಳ ಕುರಿತಾಗಿ ಎರಡು ಕೋಮುಗಳ ನಡುವೆ ಆಗಾಗ ಭುಗಿಲೇಳುವ ಸಂಘರ್ಷಗಳ ಪರಿಣಾಮವಾಗಿಯಾವುದೇ ಅವಘಡಗಳು ನಡೆಯದೇ ಇರಲು ಇಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಇದೆ. ಅಲ್ಲಿಂದ ನಮ್ಮ ಪಯಣ ಸಾಗಿದ್ದು ಮುಳ್ಳಯ್ಯನಗಿರಿ ಶಿಖರದ ಮತ್ತೊಂದು ವೀಕ್ಷಣ ಸ್ಥಳದ ಕಡೆಗೆ.

ನಮ್ಮ ಜೀಪನ್ನು ನಿಲ್ಲಿಸಿದ ಡ್ರೈವರ್ ಒಂದೆಡೆ ಮೆಟ್ಟಿಲು ಇಳಿದು ಅದು ತಲುಪುವ ಕಡೆ ಹೋಗಲು ಹೇಳಿದ. ಅಂತೆಯೇ ಆತನ ಮಾತಿನಂತೆ ಒಂದಷ್ಟು ಮೆಟ್ಟಿಲುಗಳನ್ನು ಹತ್ತುತ್ತಾ ಮತ್ತೆ ಇಳಿಯುತ್ತಾ ಸುತ್ತ ನಿಸರ್ಗದ ರುದ್ರರಮಣೀಯ ಹಸಿರು ವನಸ ರಾಶಿಯನ್ನು ಕಡಿದಾದ ರಸ್ತೆಗಳನ್ನು ಕಣ್ಣು ತುಂಬಿಕೊಳ್ಳುತ್ತಾ ಮತ್ತೊಂದೆಡೆ ಹೋಗಿ ತಲುಪಿದೆವು. ಅಲ್ಲಿ ಕೂಡ ಭರೋ ಎಂದು ಬೀಸುವ ಗಾಳಿ ನಮ್ಮಲ್ಲಿ ನಡುಕ ಉಂಟು ಮಾಡಿದರೂ ಕಾಲುಗಳನ್ನು ನೆಲವಾಗಿ ನೆಲದಲ್ಲಿ ಬಲವಾಗಿ ಬೇರೂರುತ್ತಾ ಓಡಾಡಿದೆವು. ಚಳಿಯನ್ನು ಓಡಿಸಲು, ಹತ್ತಿ ಬಂದ ಆಯಾಸವನ್ನು ತಣಿಸಲು ಅಲ್ಲೂ ಕೂಡ ಏಳೆಂಟು ಚಹಾದ ಅಂಗಡಿಗಳು, ಬಿಸಿ ಬಿಸಿ ಮ್ಯಾಗಿ, ಆಮ್ಲೆಟ್, ಬ್ರೆಡ್ ಟೋಸ್ಟ್ ಅಂಗಡಿಗಳು ಇದ್ದವು. ಐದ್ಹತ್ತು ನಿಮಿಷಗಳ ಕಾಲ ಅಲ್ಲಿ ಸುತ್ತಾಡಿ ನಂತರ ಜೀಪನ್ನು ಏರಿದ ನಮ್ಮನ್ನು ಹೊತ್ತ ಜೀಪ್ ಇದೀಗ ಮುಳ್ಳಯ್ಯನಗಿರಿಯ ಮುಖ್ಯವಾದ ಪಾಯಿಂಟ್ ನ ಕಡೆಗೆ ಡ್ರೈವರನ ಸಾರಥ್ಯದಲ್ಲಿ ಹೊರಟಿತು. ಅಬ್ಬ ! ಅಲ್ಲೂ ಕೂಡ ನೂರಾರು ಜನರು ಮೇಲೆ ನಡೆಯುತ್ತಾ ಸಾಗಿದ್ದರು. ಜೀಪ್ ನಿಂದ ಇಳಿದ ನಾವುಗಳು ಕೂಡ ಅಲ್ಲಿ ನಿಂತುಕೊಳ್ಳುವ ಹೊತ್ತಿಗೆ ಒಮ್ಮಿಂದೊಮ್ಮೆಲೆ ಭಾರಿ ಮೋಡ ಒಂದು ನಮ್ಮ ಮೂಲಕ ಹಾದುಹೋಯಿತು. ಸರಿಸುಮಾರು ಐದು ನಿಮಿಷಗಳ ಕಾಲ ನಮ್ಮ ಮೂಲಕ ಹಾದುಹೋದ ಆ ಮೋಡವು ಘನೀಭವಿಸಿದ ನೀರಿನಿಂದ ತುಂಬಿತ್ತು. ಕಾರಣ ಜೋರಾದ ತಣ್ಣಗಿನ ಗಾಳಿ ನಮ್ಮನ್ನು ಹೊಕ್ಕಂತೆ ಭಾಸವಾಗಿತ್ತು. ಅಕ್ಷರಶಃ ಪರಸ್ಪರರನ್ನು ಗಟ್ಟಿಯಾಗಿ ಹಿಡಿದುಕೊಂಡು ಕಾಲುಗಳನ್ನು ನೆಲದ ಮೇಲೆ ಕೀಲಿಸಿಕೊಂಡು ನಿಂತಿದ್ದೆವು. ಸಂಪೂರ್ಣ ಐದಾರು ನಿಮಿಷಗಳ ಕಾಲ ನಡೆದ ಮೇಘದ ಹಾಗೂ ನಮ್ಮ ಮುಖಾಮುಖಿ ನಮಗೆ ವಿಭಿನ್ನ ಅನುಭೂತಿಯನ್ನು ನೀಡಿತು. ಚಳಿಯಾಗದೇ ಇದ್ದರೂ ಕೂಡ ದೇಹವನ್ನು ಸಂಪೂರ್ಣ ತಣ್ಣಗಾಗಿಸಿದ ಭಾವ. ನಮ್ಮ ಮೈ ಕೈಗಳೆಲ್ಲ ತಣ್ಣಗೆ ಕೊರೆಯುತ್ತಿದ್ದವು ಕೂಡಲೇ ನಾವು ಅಲ್ಲಿಯೇ ಇದ್ದ ಚಹಾದ ಅಂಗಡಿಯಲ್ಲಿ ದೊಡ್ಡ ದೊಡ್ಡ ಕಪ್ಪುಗಳಲ್ಲಿ ಕಾಫಿಯನ್ನು ಕೇಳಿ ಪಡೆದುಕೊಂಡು ದೇಹದ ಶಾಖವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ ಸೋತೆವು ಆದರು ಬಿಸಿಯಾದ ದ್ರವ ಗಂಟಲಿಗೆ ಇಳಿಯುತ್ತಿದ್ದಂತೆ ಕೊಂಚ ಚೈತನ್ಯ ನಮ್ಮಲ್ಲಿ ಮೂಡಿತು. ಇಲ್ಲಿಂದ ಸಾವಿರಾರು ಮೆಟ್ಟಲುಗಳ ಹಾದಿ ಮುಳ್ಳಯ್ಯನಗಿರಿಯ ಶಿಖರದ ಅಂತಿಮ ತುದಿಯನ್ನು ತಲುಪಲು.

ಪ್ರಾರಂಭದಲ್ಲಿ ಅತ್ಯಂತ ಹುಮ್ಮಸ್ಸಿನಿಂದ ಮೆಟ್ಟಿಲುಗಳನ್ನು ಎಣಿಸುತ್ತಾ ಹೋದ ನಮಗೆ ಒಂದು ಹಂತದಲ್ಲಿ ಎಣಿಕೆ ತಪ್ಪಿ ಹೋಯಿತು. ಆದರೂ ಸಾಕಷ್ಟು ಮೆಟ್ಟಿಲುಗಳನ್ನು ಏರಿದ ನಾವು ಗಿರಿಯ ತುತ್ತ ತುದಿಯನ್ನು ತಲುಪಿದೆವು. ಅಲ್ಲಿ ನೋಡಿದರೆ ನಮಗೆ ನಿರಾಶೆ ಕಾದಿತ್ತು. ಸಂಪೂರ್ಣ ಮೋಡಗಳಿಂದ ಆವೃತವಾಗಿದ್ದ ಕಾರಣ ನಮಗೆ ಅಲ್ಲೇನೂ ಕಾಣ ಸಿಗಲಿಲ್ಲ. ಹಸಿರ ವನಸಿರಿಯಾಗಲಿ, ಕಾನನದ ಏರಿಳಿತಗಳಾಗಲಿ,ಆಳ ಕಣಿವೆಗಳು, ಚಿಲುಮೆಗಳು ಜರಿಗಳ ದರ್ಶನ ನಮಗೆ ದೊರೆಯಲೇ ಇಲ್ಲ. ಅಲ್ಲಿ ನಿಂತು ಒಂದಷ್ಟು ಫೋಟೋ ತೆಗೆದುಕೊಳ್ಳಬೇಕೆಂದರೆ ಕೂಡ ಮಸುಕಾದ ಮೋಡ ಕವಿದ ವಾತಾವರಣ ಒಪ್ಪಿಗೆ ನೀಡಲಿಲ್ಲ. ಅಂತೂ ಇಂತೂ ಅಲ್ಲಿಗೆ ಬಂದ ನೆನಪಿನ ಸಲುವಾಗಿ ಒಂದಷ್ಟು ಫೋಟೋಗಳನ್ನು ತೆಗೆದುಕೊಂಡು ತೃಪ್ತಿಪಟ್ಟೆವು. ಮುಳ್ಳಯ್ಯನಗಿರಿಯ ಸರಿಸುಮಾರು ಏಳುವರೆ ಸಾವಿರ ಅಡಿ ಎತ್ತರದ ಗಿರಿ ಶಿಖರವನ್ನು ಮತ್ತೊಮ್ಮೆ ನೋಡಲು ಚಳಿಗಾಲದಲ್ಲಿ ಬರಬೇಕು ಎಂಬ ಆಶಯವನ್ನು ಹೊತ್ತು ಮೆಟ್ಟಿಲುಗಳನ್ನು ಬಳಸಿ ಕೆಳಗಿಳಿದು ಬಂದೆವು.

ಇಳಿಜಾರಿನತ್ತ ನಮ್ಮ ಪಯಣ ಸಾಗಿತ್ತು. ಪರಸ್ಪರ ಕೈಹಿಡಿದು ಒಬ್ಬರಿಗೊಬ್ಬರು ಜೊತೆಯಾಗಿ ಸಾಗಿ ಬಂದು ಅಲ್ಲಿ ನಿಂತಾಗ ಬದುಕಿನ ಒಂದು ಮಹತ್ತರ ಮೈಲಿಗಲ್ಲನ್ನು ತಲುಪಿದ ಭಾವ ನಮ್ಮಲ್ಲಿ ಉಂಟಾಗಿತ್ತು. ಅಲ್ಲಿಂದ ಕೆಳಗೆ ಮತ್ತೆ ಜೀಪಿನಲ್ಲಿ ನಮ್ಮ ಪಯಣ ಆರಂಭವಾಯಿತು . ಈ ಬಾರಿ ಇಳಿಜಾರಿನತ್ತ ಹೊರಟ ಪಯಣ ಒಂದೆರಡು ಸಾವಿರ ಅಡಿಗಳ ಕೆಳಕ್ಕೆ ಇಳಿದಾಗ ಮತ್ತೊಂದು ದಾರಿಯ ಮೂಲಕ ಜರಿ ಜಲಪಾತದತ್ತ ಸಾಗಿತ್ತು. ಇದುವರೆಗೂ ಸಾಗಿ ಬಂದ ಹಾದಿ ಗಿಂತ ಅತ್ಯಂತ ಕಠಿಣವಾದ ರಸ್ತೆಯ ಅಲ್ಲದ ರಸ್ತೆಯಲ್ಲಿ ಕೊರಕಲುಗಳನ್ನು ದಾಟಿ ಜೀಪ್ನ ಡ್ರೈವರ್ ನಮಗೆ ಜೀವ ಬಾಯಿಗೆ ಬಂದಂತಾಗುತ್ತಿತ್ತು. ಸುತ್ತ ಕಾಫಿ ಗಿಡಗಳು ಹರಡಿಕೊಂಡಿದ್ದರೆ ಆಳವಾದ ಕಮರಿಯಂತಹ ರಸ್ತೆಯ ಗುಂಟ ಸಾಗಿ ಒಂದೆಡೆ ಜೀಪ್ ನಿಲ್ಲಿಸಿ ನಮಗೆ ಟೋಕನ್ ನೀಡಿದರು. ನಾವು ಜರಿ ಫಾಲ್ಸ್ ನೋಡಿ ಬರುವಾಗ ಯಾವುದೇ ಜೀಪಿನವರಿಗೆ ತೋರಿಸಿದರೂ ಅವರು ನಮ್ಮನ್ನು ಹತ್ತಿಸಿಕೊಂಡು ನಮ್ಮ ನಿಗದಿತ ತಾಣಕ್ಕೆ ಕರೆದೊಯ್ಯಲು ನೀಡಿದ ಟೋಕನ್ ಅದಾಗಿತ್ತು ದರು.

ಜರಿ ಫಾಲ್ಸ್ ಮತ್ತೊಂದು ಸುಂದರವಾದ ಜಲಪಾತ. ಜೋಗ ಜಲಪಾತದಷ್ಟು ಎತ್ತರವಾದ ಜಲಪಾತ ಅದಲ್ಲವಾದರೂ ಕೂಡ ತುಸು ಎತ್ತರದ ಪ್ರದೇಶದಿಂದ ನೀರು ಚಿಮ್ಮಿ ಹಲವಾರು ಕವಲುಗಳಲ್ಲಿ ಧಾರೆಯಾಗಿ ಸುರಿಯುವುದನ್ನು ನೋಡಲು ಎರಡು ಕಣ್ಣುಗಳು ಸಾಲದಾಗಿತ್ತು. ಅದ್ಭುತವಾದ ಜಲಧಾರೆಯ ದೃಶ್ಯಗಳನ್ನು ಕಣ್ಣಲ್ಲಿ ಮನಸಲ್ಲಿ ತುಂಬಿಕೊಂಡು ಒಂದಷ್ಟು ಫೋಟೋಗಳನ್ನು ತೆಗೆದುಕೊಂಡು ಮರಳಿ ಪ್ರಯಾಣ ಬೆಳೆಸಿದವು.



ವೀಣಾ ಹೇಮಂತ್ ಗೌಡ ಪಾಟೀಲ್

# ಪ್ಲಾಸ್ಟಿಕ್ : ಮಾನವ ಬದುಕಿಗೆ ವರವೇ ಶಾಪವೇ ಪರಿಸರ ಸಂರಕ್ಷಣೆಯತ್ತ ನಮ್ಮ ಹೊಣೆಗಾರಿಕೆಯ ಹೆಜ್ಜೆ

ಪ್ಲಾಸ್ಟಿಕ್ ಇಂದಿನ ಆಧುನಿಕ ಜೀವನದ ಅವಿಭಾಜ್ಯ ಅಂಗವಾಗಿ ಬೆಳೆದಿರುವ ಒಂದು ವಸ್ತು. ಬೆಳಿಗ್ಗೆ ಎದ್ದು ಕೈಗೆ ಸಿಗುವ ಹಾಲಿನ ಪ್ಯಾಕೆಟ್‌ನಿಂದ ಹಿಡಿದು, ದಿನನಿತ್ಯದ ಖರೀದಿ ಚೀಲ, ನೀರಿನ ಬಾಟಲಿ, ಆಹಾರ ಪೊಟ್ಟಣ, ಗೃಹೋಪಯೋಗಿ ವಸ್ತುಗಳು, ವೈದ್ಯಕೀಯ ಉಪಕರಣಗಳು, ಕೈಗಾರಿಕಾ ಉತ್ಪನ್ನಗಳು ಸೇರಿದಂತೆ ನಮ್ಮ ಬದುಕಿನ ಬಹುತೇಕ ಪ್ರತಿಯೊಂದು ಕ್ಷೇತ್ರದಲ್ಲೂ ಪ್ಲಾಸ್ಟಿಕ್ ತನ್ನ ಸ್ಥಾನವನ್ನು ಪಡೆದುಕೊಂಡಿದೆ. ಕಡಿಮೆ ಬೆಲೆ, ಕಡಿಮೆ ತೂಕ, ಸುಲಭ ಬಳಕೆ, ಬಾಳಿಕೆ ಹಾಗೂ ವಿವಿಧ ಆಕಾರಗಳಲ್ಲಿ ತಯಾರಿಸಬಹುದಾದ ಗುಣದಿಂದ ಪ್ಲಾಸ್ಟಿಕ್ ಜನಪ್ರಿಯವಾಗಿದೆ.

ಆದರೆ ಇದೇ ಪ್ಲಾಸ್ಟಿಕ್ ಇಂದು ಭೂಮಿಯ ಪರಿಸರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ನಾವು ಕೆಲವೇ ನಿಮಿಷಗಳ ಕಾಲ ಬಳಸುವ ಪ್ಲಾಸ್ಟಿಕ್ ಚೀಲ ಅಥವಾ ಕಪ್‌ಗಳು ಪ್ರಕೃತಿಯಲ್ಲಿ ನೂರಾರು ವರ್ಷಗಳವರೆಗೆ ಉಳಿಯುವ ಸಾಧ್ಯತೆಯಿದೆ. ಬಳಸಿ ಎಸೆದ ಪ್ಲಾಸ್ಟಿಕ್ ಮಣ್ಣು, ನೀರು, ನದಿಗಳು, ಕೆರೆಗಳು, ಸಮುದ್ರಗಳು ಹಾಗೂ ಜೀವಜಗತ್ತಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

**ಪ್ಲಾಸ್ಟಿಕ್‌ನ ಬಳಕೆ ಏಕೆ ಹೆಚ್ಚಾಯಿತು**

ಪ್ಲಾಸ್ಟಿಕ್ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದಾದ ವಸ್ತುವಾಗಿದೆ. ಇದು ಹಗುರವಾಗಿದ್ದು ಸುಲಭವಾಗಿ ಸಾಗಿಸಬಹುದು. ನೀರು, ತೇವಾಂಶ ಮತ್ತು ಹಲವು ರಾಸಾಯನಿಕಗಳ ವಿರುದ್ಧ ನಿರೋಧಕವಾಗಿರುವುದರಿಂದ ಆಹಾರ ಸಂಗ್ರಹಣೆ, ಪ್ಯಾಕೇಜಿಂಗ್, ವೈದ್ಯಕೀಯ ಕ್ಷೇತ್ರ, ಕಟ್ಟಡ ನಿರ್ಮಾಣ, ವಾಹನೋದ್ಯಮ, ವಿದ್ಯುತ್ ಉಪಕರಣಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಇದರ ಬಳಕೆ ಹೆಚ್ಚಾಗಿದೆ. ಹಿಂದೆ ಮಣ್ಣು, ಲೋಹ, ಗಾಜು, ಮರ ಹಾಗೂ ಬಟ್ಟೆಯಿಂದ ತಯಾರಿಸಲಾಗುತ್ತಿದ್ದ ಅನೇಕ ವಸ್ತುಗಳಿಗೆ ಇಂದು ಪ್ಲಾಸ್ಟಿಕ್ ಪರ್ಯಾಯವಾಗಿದೆ. ಒಂದು ಬಾರಿ ಬಳಸಿ ಎಸೆಯುವ ವಸ್ತುಗಳ ಸಂಸ್ಕೃತಿ ಹೆಚ್ಚಾದಂತೆ ಪ್ಲಾಸ್ಟಿಕ್ ತ್ಯಾಜ್ಯವೂ ಹೆಚ್ಚಾಗಿದೆ.

**ಬಳಸಿ ಎಸೆಯುವ ಸಂಸ್ಕೃತಿ ದೊಡ್ಡ ಸಮಸ್ಯೆ**

ಪ್ಲಾಸ್ಟಿಕ್‌ನ ಸಮಸ್ಯೆ ಅದರ ಅಸ್ತಿತ್ವದಲ್ಲಷ್ಟೇ ಇಲ್ಲ; ಅದನ್ನು ಹೇಗೆ ಬಳಸುತ್ತೇವೆ ಮತ್ತು ಬಳಕೆಯ ನಂತರ ಹೇಗೆ ವಿಲೇವಾರಿ ಮಾಡುತ್ತೇವೆ ಎಂಬುದಲ್ಲಿದೆ. ಒಮ್ಮೆ ಬಳಸಿ ಎಸೆಯುವ ಪ್ಲಾಸ್ಟಿಕ್ ಕಪ್, ಪ್ಲೇಟ್, ಚಮಚ, ಸ್ಟ್ರಾ, ಚೀಲ, ಆಹಾರ ಪೊಟ್ಟಣಗಳು ಕೆಲವೇ ನಿಮಿಷಗಳ ಬಳಕೆಯ ನಂತರ ಕಸದ ರೂಪ ಪಡೆಯುತ್ತವೆ. ಈ ಕಸವನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ರಸ್ತೆಬದಿ, ಚರಂಡಿ, ಕಾಲುವೆ, ಕೆರೆ ಮತ್ತು ನದಿಗಳು ಪ್ಲಾಸ್ಟಿಕ್‌ನಿಂದ ತುಂಬಿಕೊಳ್ಳುತ್ತವೆ. ಮಳೆಗಾಲದಲ್ಲಿ ಚರಂಡಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಿಲುಕಿಕೊಂಡು ನೀರಿನ ಹರಿವಿಗೆ ಅಡ್ಡಿಯಾಗುತ್ತದೆ. ಇದರಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೀರು ನಿಲ್ಲುವ ಸಮಸ್ಯೆ ಮತ್ತು ಕೆಲವೊಮ್ಮೆ ಪ್ರವಾಹದಂತಹ ಪರಿಸ್ಥಿತಿಯೂ



ಉಂಟಾಗಬಹುದು.

**ಮಣ್ಣಿನ ಮೇಲೆ ಪ್ಲಾಸ್ಟಿಕ್‌ನ ಪರಿಣಾಮ**

ಪ್ಲಾಸ್ಟಿಕ್ ಮಣ್ಣಿನಲ್ಲಿ ಸುಲಭವಾಗಿ ಕರಗುವುದಿಲ್ಲ. ಮಣ್ಣಿನಲ್ಲಿ ಸೇರಿಕೊಂಡ ಪ್ಲಾಸ್ಟಿಕ್ ತ್ಯಾಜ್ಯವು ಮಣ್ಣಿನ ಸ್ವಾಭಾವಿಕ ಗುಣಗಳನ್ನು ಹದಗೆಡಿಸಬಹುದು. ಕೃಷಿಭೂಮಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚಾದರೆ ಮಣ್ಣಿನ ರಚನೆ ಮತ್ತು ನೀರಿನ ಚಲನೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಕಸವನ್ನು ಎಲ್ಲೆಂದರಲ್ಲಿ ಎಸೆಯುವ ಅಭ್ಯಾಸ ಮುಂದುವರಿದರೆ, ಮುಂದಿನ ಪೀಳಿಗೆಗೆ ನಾವು ಶುದ್ಧ ಭೂಮಿಯ ಬದಲು ಪ್ಲಾಸ್ಟಿಕ್ ತ್ಯಾಜ್ಯದಿಂದ ಕೂಡಿದ ಪರಿಸರವನ್ನು ಬಿಟ್ಟುಹೋಗುವ ಅಪಾಯವಿದೆ.

**ಜಲಮೂಲಗಳಿಗೂ ಪ್ಲಾಸ್ಟಿಕ್ ಅಪಾಯ**

ನಮ್ಮ ಕೆರೆ, ನದಿ, ಕಾಲುವೆ ಹಾಗೂ ಸಮುದ್ರಗಳಿಗೆ ಸೇರುವ ಪ್ಲಾಸ್ಟಿಕ್ ತ್ಯಾಜ್ಯವು ಜಲಚರ ಜೀವಿಗಳಿಗೆ ಅಪಾಯಕಾರಿಯಾಗಿದೆ. ಮೀನುಗಳು, ಆಮೆಗಳು, ಪಕ್ಷಿಗಳು ಹಾಗೂ ಇತರ ಜೀವಿಗಳು ಪ್ಲಾಸ್ಟಿಕ್ ತುಂಡುಗಳನ್ನು ಆಹಾರವೆಂದು ತಪ್ಪಾಗಿ ಸೇವಿಸುವ ಘಟನೆಗಳು ಸಂಭವಿಸುತ್ತವೆ. ಪ್ಲಾಸ್ಟಿಕ್‌ನ ದೊಡ್ಡ ತುಂಡುಗಳು ಜಲಚರ ಜೀವಿಗಳ ದೇಹದಲ್ಲಿ ಸಿಲುಕಿಕೊಳ್ಳಬಹುದು. ಕಾಲಕ್ರಮೇಣ ದೊಡ್ಡ ಪ್ಲಾಸ್ಟಿಕ್ ವಸ್ತುಗಳು ಸಣ್ಣ ತುಂಡುಗಳಾಗಿ ಒಡೆದು ಮೈಕ್ರೋಪ್ಲಾಸ್ಟಿಕ್‌ಗಳಾಗಿ ಪರಿಸರದಲ್ಲಿ ಹರಡಬಹುದು. ಈ ಮೈಕ್ರೋಪ್ಲಾಸ್ಟಿಕ್‌ಗಳು ನೀರು, ಮಣ್ಣು ಮತ್ತು ಆಹಾರ ಸರಪಳಿಯಲ್ಲಿಯೂ ಕಂಡುಬರುವುದರಿಂದ ಇದು ಪರಿಸರ ವಿಜ್ಞಾನಿಗಳ ಆತಂಕಕ್ಕೆ ಕಾರಣವಾಗಿದೆ.

**ಪ್ರಾಣಿಪಕ್ಷಿಗಳ ಬದುಕಿಗೂ ಕಂಟಕ**

ರಸ್ತೆ ಬದಿ, ಕಸದ ಗುಡ್ಡ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ಆಹಾರ ಹುಡುಕುವ ಜಾನುವಾರುಗಳು ಪ್ಲಾಸ್ಟಿಕ್ ಚೀಲಗಳೊಂದಿಗೆ ಆಹಾರ ತಿನ್ನುವ ಸಾಧ್ಯತೆ ಇದೆ. ಇಂತಹ ಪ್ಲಾಸ್ಟಿಕ್ ಅವುಗಳ ಜೀರ್ಣಾಂಗ ವ್ಯವಸ್ಥೆಯಲ್ಲಿ ಸಮಸ್ಯೆ ಉಂಟುಮಾಡಬಹುದು. ಪಕ್ಷಿಗಳು ಮತ್ತು ಜಲಚರ ಜೀವಿಗಳೂ ಪ್ಲಾಸ್ಟಿಕ್ ತ್ಯಾಜ್ಯದಿಂದ ತೊಂದರೆ ಅನುಭವಿಸುತ್ತವೆ. ಮಾನವನ ಸಣ್ಣ ನಿರ್ಲಕ್ಷ್ಯವು ಮತ್ತೊಂದು ಜೀವಿಯ ಬದುಕಿಗೆ ದೊಡ್ಡ ಬೆಲೆಯಾಗಬಹುದು.

**ಪ್ಲಾಸ್ಟಿಕ್ ಸುಡುವುದು ಪರಿಹಾರವಲ್ಲ**

ಕೆಲವರು ಪ್ಲಾಸ್ಟಿಕ್ ತ್ಯಾಜ್ಯವನ್ನು ಸುಟ್ಟು ನಾಶಪಡಿಸುವುದು ಸುಲಭವಾದ ಮಾರ್ಗ ಎಂದು ಭಾವಿಸುತ್ತಾರೆ. ಆದರೆ ಎಲ್ಲ ರೀತಿಯ ಪ್ಲಾಸ್ಟಿಕ್‌ಗಳನ್ನು ಎಲ್ಲೆಂದರಲ್ಲಿ ಸುಡುವುದು ಸುರಕ್ಷಿತ ವಿಲೇವಾರಿ ವಿಧಾನವಲ್ಲ. ಸುಡುವ ಸಂದರ್ಭದಲ್ಲಿ ಹಾನಿಕಾರಕ ಹೊಗೆ ಮತ್ತು ವಾಯುಮಾಲಿನ್ಯ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಪ್ಲಾಸ್ಟಿಕ್‌ನ್ನು ಸುಡುವ ಬದಲು ಕಡಿಮೆ ಬಳಕೆ, ಮರುಬಳಕೆ ಮತ್ತು ಸರಿಯಾದ ವಿಂಗಡಣೆ ಹಾಗೂ ಮರುಸಂಸ್ಕರಣೆಗೆ ಆದ್ಯತೆ ನೀಡಬೇಕು.

**ಪ್ಲಾಸ್ಟಿಕ್‌ಗಿಂತ ಪರ್ಯಾಯ ವಸ್ತುಗಳ ಬಳಕೆ**

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ನಮ್ಮ ದೈನಂದಿನ ಬದುಕಿನಲ್ಲಿಯೇ ಸಣ್ಣ ಬದಲಾವಣೆಗಳನ್ನು ಮಾಡಬಹುದು. ಮಾರುಕಟ್ಟೆಗೆ ಹೋಗುವಾಗ ಬಟ್ಟೆಯ ಚೀಲ ತೆಗೆದುಕೊಂಡು ಹೋಗುವುದು, ನೀರಿಗಾಗಿ ಮರುಬಳಕೆ ಮಾಡಬಹುದಾದ ಬಾಟಲಿ ಬಳಸುವುದು, ಒಂದೇ ಬಾರಿ ಬಳಸಿ ಎಸೆಯುವ ವಸ್ತುಗಳನ್ನು ಸಾಧ್ಯವಾದಷ್ಟು ತಪ್ಪಿಸುವುದು, ಆಹಾರ ಸಂಗ್ರಹಣೆಗೆ ಸೂಕ್ತವಾದ ಮರುಬಳಕೆ ವಸ್ತುಗಳನ್ನು ಬಳಸುವುದು ಮುಂತಾದ ಕ್ರಮಗಳು ಪ್ಲಾಸ್ಟಿಕ್ ತ್ಯಾಜ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ.

ಹಳೆಯ ಕಾಲದಲ್ಲಿ ನಮ್ಮ ಮನೆಗಳಲ್ಲಿ ಬಳಕೆಯಲ್ಲಿದ್ದ ಬಟ್ಟೆ ಚೀಲಗಳು, ಲೋಹದ ಡಬ್ಬಿಗಳು, ಗಾಜಿನ ಬಾಟಲಿಗಳು ಹಾಗೂ ಇತರ ಮರುಬಳಕೆ ವಸ್ತುಗಳ ಸಂಸ್ಕೃತಿಯನ್ನು ಮತ್ತೆ ಬೆಳೆಸಬೇಕಾಗಿದೆ.

**ಶಾಲೆಯಿಂದಲೇ ಪರಿಸರ ಜಾಗೃತಿ**

ಪ್ಲಾಸ್ಟಿಕ್ ವಿರುದ್ಧದ ಹೋರಾಟ ಮನೆ ಮತ್ತು ಶಾಲೆಯಿಂದಲೇ ಆರಂಭವಾಗಬೇಕು. ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಪ್ಲಾಸ್ಟಿಕ್‌ನ ದುಷ್ಪರಿಣಾಮಗಳ ಬಗ್ಗೆ ತಿಳಿಸಬೇಕು. ಶಾಲೆಗಳಲ್ಲಿ ಪರಿಸರ ದಿನಾಚರಣೆ, ಸ್ವಚ್ಛತಾ ಅಭಿಯಾನ, ಪ್ಲಾಸ್ಟಿಕ್ ಮುಕ್ತ ಆವರಣ, ಬಟ್ಟೆ ಚೀಲ ಬಳಕೆ ಹಾಗೂ ತ್ಯಾಜ್ಯ ವಿಂಗಡಣೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬಹುದು. ಮಕ್ಕಳು ಕಲಿತ ಪರಿಸರ ಸಂರಕ್ಷಣೆಯ ಸಂದೇಶವನ್ನು ತಮ್ಮ ಮನೆಗಳಿಗೂ ಕೊಂಡೊಯ್ಯುತ್ತಾರೆ. ಹೀಗಾಗಿ ಶಾಲೆಗಳು ಪರಿಸರ ಜಾಗೃತಿಯ ಪ್ರಮುಖ ಕೇಂದ್ರಗಳಾಗಬಹುದು.

**ಮನೆಮನೆಯಿಂದಲೇ ಬದಲಾವಣೆ**

ಪ್ಲಾಸ್ಟಿಕ್ ಸಮಸ್ಯೆ ಕೇವಲ ಸರ್ಕಾರದ ಸಮಸ್ಯೆಯಲ್ಲ. ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಹೌದು. ಮನೆಯಲ್ಲಿಯೇ ಒಣ ಮತ್ತು ತೇವ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು, ಪ್ಲಾಸ್ಟಿಕ್ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆಯದಿರುವುದು, ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಮರುಬಳಕೆ ಮಾಡುವುದು ಮತ್ತು ಮರುಸಂಸ್ಕರಣೆಗೆ ಯೋಗ್ಯವಾದ ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡುವುದು ನಮ್ಮ ಕರ್ತವ್ಯ. "ನಾನು ಒಬ್ಬನೇ ಮಾಡಿದರೆ ಏನು ಬದಲಾವಣೆ ಆಗುತ್ತದೆ?" ಎಂಬ ಪ್ರಶ್ನೆಯನ್ನು ಬಿಟ್ಟು, "ನನ್ನಿಂದಲೇ ಬದಲಾವಣೆ ಆರಂಭವಾಗಲಿ" ಎಂಬ ಮನೋಭಾವ ಬೆಳೆಸಿಕೊಳ್ಳಬೇಕು.

**ವ್ಯಾಪಾರಸ್ಥರು ಮತ್ತು ಮಾರುಕಟ್ಟೆಗಳ ಪಾತ್ರ**

ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆ ಕಡಿಮೆಯಾಗಬೇಕಾದರೆ ವ್ಯಾಪಾರಸ್ಥರು ಮತ್ತು ಗ್ರಾಹಕರು ಇಬ್ಬರೂ ಸಹಕರಿಸಬೇಕು. ಗ್ರಾಹಕರು ಬಟ್ಟೆಯ ಅಥವಾ ಮರುಬಳಕೆ ಚೀಲಗಳನ್ನು ತರುವ ಅಭ್ಯಾಸ ಬೆಳೆಸಿಕೊಳ್ಳಬೇಕು. ವ್ಯಾಪಾರಸ್ಥರೂ ಸಾಧ್ಯವಾದಷ್ಟು ಪರಿಸರ ಸ್ನೇಹಿ ಪ್ಯಾಕೇಜಿಂಗ್ ಬಳಸಲು ಮುಂದಾಗಬೇಕು. ಸಣ್ಣ ಅಂಗಡಿಯಿಂದ ದೊಡ್ಡ ವ್ಯಾಪಾರ ಸಂಸ್ಥೆಯವರೆಗೆ ಎಲ್ಲರೂ ಈ ಬದಲಾವಣೆಯಲ್ಲಿ ಭಾಗಿಯಾಗಬೇಕು.

**ಸರ್ಕಾರದ ಕ್ರಮಗಳ ಜೊತೆಗೆ ಜನರ ಸಹಕಾರ ಅಗತ್ಯ**

ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಸರ್ಕಾರಗಳು ವಿವಿಧ ನಿಯಮಗಳು ಮತ್ತು ಅಭಿಯಾನಗಳನ್ನು ಜಾರಿಗೊಳಿಸುತ್ತಿವೆ. ಆದರೆ ಯಾವುದೇ ಕಾನೂನು ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಕಾನೂನು ಇದೆ ಎಂಬ ಕಾರಣಕ್ಕೆ ಮಾತ್ರ ಪ್ಲಾಸ್ಟಿಕ್ ಸಮಸ್ಯೆ ಪರಿಹಾರವಾಗುವುದಿಲ್ಲ. ನಿಯಮ ಪಾಲನೆ, ಸರಿಯಾದ ತ್ಯಾಜ್ಯ ವಿಲೇವಾರಿ, ಪರಿಸರ ಜಾಗೃತಿ ಹಾಗೂ ವೈಯಕ್ತಿಕ ಹೊಣೆಗಾರಿಕೆ ಒಂದಾಗಿ ಬಂದಾಗ ಮಾತ್ರ ಶಾಶ್ವತ ಬದಲಾವಣೆ ಸಾಧ್ಯ.

**ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ತ್ಯಜಿಸುವುದೇ ಪರಿಹಾರವೇ**

ಪ್ಲಾಸ್ಟಿಕ್ ಹಲವು ಕ್ಷೇತ್ರಗಳಲ್ಲಿ ಉಪಯುಕ್ತವಾಗಿರುವುದರಿಂದ ಪ್ರತಿಯೊಂದು ಪ್ಲಾಸ್ಟಿಕ್ ವಸ್ತುವನ್ನೂ ಒಂದೇ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ. ವಿಶೇಷವಾಗಿ ವೈದ್ಯಕೀಯ, ವೈಜ್ಞಾನಿಕ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಕೆಲವು ಪ್ಲಾಸ್ಟಿಕ್ ಉತ್ಪನ್ನಗಳಿಗೆ ಮಹತ್ವದ ಬಳಕೆಗಳಿವೆ. ಆದ್ದರಿಂದ ಗುರಿ "ಎಲ್ಲಾ ಪ್ಲಾಸ್ಟಿಕ್‌ನ್ನು ತಕ್ಷಣವೇ ನಿರ್ಮೂಲನೆ ಮಾಡುವುದು" ಎನ್ನುವುದಕ್ಕಿಂತ, ಅಗತ್ಯವಿಲ್ಲದ ಹಾಗೂ ಒಂದೇ ಬಾರಿ ಬಳಸಿ ಎಸೆಯುವ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಸರಿಯಾದ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡುವುದು ಮತ್ತು ಮರುಬಳಕೆ ಹಾಗೂ ಮರುಸಂಸ್ಕರಣೆಗೆ ಒತ್ತು ನೀಡುವುದು ಆಗಬೇಕು.

**ಪರಿಸರ ಉಳಿಸುವುದು ಎಂದರೆ ನಮ್ಮನ್ನೇ ಉಳಿಸುವುದು**

ಭೂಮಿ ನಮ್ಮ ಸ್ವತ್ತು ಮಾತ್ರವಲ್ಲ; ಅದು ಮುಂದಿನ ಪೀಳಿಗೆಯಿಂದ ನಾವು ಪಡೆದ ಹೊಣೆಗಾರಿಕೆಯೂ ಹೌದು. ಇಂದು ನಾವು ಎಸೆಯುವ ಪ್ರತಿಯೊಂದು ಪ್ಲಾಸ್ಟಿಕ್ ಚೀಲ, ಬಾಟಲಿ ಅಥವಾ ಪೊಟ್ಟಣದ ಪರಿಣಾಮವನ್ನು ನಾಳೆಯ ಪೀಳಿಗೆ ಎದುರಿಸಬೇಕಾಗಬಹುದು. ಸ್ವಚ್ಛವಾದ ರಸ್ತೆ, ನಿರ್ಮಲವಾದ ಕೆರೆ, ಪ್ಲಾಸ್ಟಿಕ್ ಮುಕ್ತ ಗ್ರಾಮ, ಹಸಿರಿನಿಂದ ಕೂಡಿದ ಹೊಲ, ಸ್ವಚ್ಛವಾದ ನದಿ ಹಾಗೂ ಸುರಕ್ಷಿತ ಜೀವಜಗತ್ತು?ಇವೆಲ್ಲವೂ ನಮ್ಮ ಒಗ್ಗಟ್ಟಿನ ಪ್ರಯತ್ನದಿಂದ ಸಾಧ್ಯ.ಪ್ಲಾಸ್ಟಿಕ್‌ನ ಸಮಸ್ಯೆ ದೊಡ್ಡದಾಗಿದೆ. ಆದರೆ ಅದಕ್ಕಿಂತ ದೊಡ್ಡದು ಮಾನವನ ಸಂಕಲ್ಪ. ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಸಣ್ಣ ಬದಲಾವಣೆ ಮಾಡಿಕೊಂಡರೆ ದೊಡ್ಡ ಸಾಮಾಜಿಕ ಬದಲಾವಣೆ ಸಾಧ್ಯ.

**"ಪ್ಲಾಸ್ಟಿಕ್ ಕಡಿಮೆ ಬಳಸಿ, ಪ್ರಕೃತಿಯನ್ನು ಹೆಚ್ಚು ಪ್ರೀತಿಸಿ."**

"ಬಳಸಿ ಎಸೆಯುವ ಸಂಸ್ಕೃತಿಗೆ ವಿರಾಮ ನೀಡಿ; ಮರುಬಳಕೆಯ ಸಂಸ್ಕೃತಿಗೆ ಚಾಲನೆ ನೀಡಿ." ನಮ್ಮ ಕೈಯಲ್ಲಿರುವ ಒಂದು ಚಿಕ್ಕ ಬಟ್ಟೆ ಚೀಲ, ಒಂದು ಮರುಬಳಕೆ ಬಾಟಲಿ ಅಥವಾ ಒಂದು ಪ್ಲಾಸ್ಟಿಕ್ ವಸ್ತುವನ್ನು ನಿರಾಕರಿಸುವ ನಿರ್ಧಾರ?ಮುಂದಿನ ಪೀಳಿಗೆಯ ಪರಿಸರವನ್ನು ಉಳಿಸುವ ದೊಡ್ಡ ಹೆಜ್ಜೆಯಾಗಬಹುದು.

**ಇಂದಿನ ಸಂಕಲ್ಪ**

ಪ್ಲಾಸ್ಟಿಕ್‌ನ್ನು ಎಲ್ಲೆಂದರಲ್ಲಿ ಎಸೆಯುವುದಿಲ್ಲ. ಅಗತ್ಯವಿಲ್ಲದ ಏಕಬಳಕೆ ಪ್ಲಾಸ್ಟಿಕ್‌ನ್ನು ತಪ್ಪಿಸುತ್ತೇವೆ. ಮರುಬಳಕೆ ಮಾಡಬಹುದಾದ ವಸ್ತುಗಳಿಗೆ ಆದ್ಯತೆ ನೀಡುತ್ತೇವೆ. ತ್ಯಾಜ್ಯವನ್ನು ವಿಂಗಡಿಸಿ ವಿಲೇವಾರಿ ಮಾಡುತ್ತೇವೆ. ನಮ್ಮ ಮನೆ, ಊರು ಮತ್ತು ಪರಿಸರವನ್ನು ಸ್ವಚ್ಛವಾಗಿಡುತ್ತೇವೆ. ಮುಂದಿನ ಪೀಳಿಗೆಗೆ ಸ್ವಚ್ಛ ಹಾಗೂ ಹಸಿರು ಭೂಮಿಯನ್ನು ಉಳಿಸಿ ಕೊಡುತ್ತೇವೆ. ಪ್ರಕೃತಿ ನಮ್ಮದು ಮಾತ್ರವಲ್ಲ? ಮುಂದಿನ ಪೀಳಿಗೆಯದ್ದೂ ಹೌದು. ಆದ್ದರಿಂದ ಪ್ಲಾಸ್ಟಿಕ್ ವಿರುದ್ಧದ ಹೋರಾಟವನ್ನು ಇಂದಿನಿಂದಲೇ ನಮ್ಮಿಂದಲೇ ಆರಂಭಿಸೋಣ.

ವಿನಾಯಕ ಬಿ. ತಿಪ್ಪಣ್ಣನವರ

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

# ವಿಬಿ ಜಿ ರಾಮ್ ಜಿ ಯೋಜನೆಯಡಿ ವಿಶೇಷ ಜಾಗೃತಿ ಹಾಗೂ ಗ್ಯಾರಂಟಿ ಕಾರ್ಡ್ ಅಭಿಯಾನ




ಶಿರಹಟ್ಟಿ: ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಸ್ವಗ್ರಾಮದಲ್ಲಿಯೇ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮಿಷನ್ (ಗ್ರಾಮೀಣ) ಯೋಜನೆಯಡಿ ತಾಲ್ಲೂಕಿನಾದ್ಯಂತ ಆಗಸ್ಟ್ 15 ರಿಂದ ಸೆಪ್ಟೆಂಬರ್ 15 ರವರೆಗೆ ಜಾಬ್ ಕಾರ್ಡ್ ಮೇಳ ಹಾಗೂ ವಿಶೇಷ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು ಅದರ ಅಂಗವಾಗಿ ಇಂದು ಕಡಕೋಳ, ರಣತುರ, ಮಜ್ಜುರು ಗ್ರಾಮಗಳಲ್ಲಿ ಜಾಬ್ ಕಾರ್ಡ್ ಮೇಳ ಹಮ್ಮಿಕೊಳ್ಳಲಾಗಿದೆ.

ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮಾತನಾಡಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಜಾಬ್‌ಕಾರ್ಡ್ ಮೇಳ ನಡೆಸುವುದರ ಮೂಲಕ ಗ್ರಾಮೀಣ ಕುಟುಂಬಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದರ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾನವ ದಿನಗಳ ಸೃಷ್ಟಿಗೆ ಯೋಜನೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಲಾಗಿದೆ. ತಾಲ್ಲೂಕಿನಲ್ಲಿ ಐಇಸಿ ಚಟುವಟಿಕೆಯಡಿ ಗ್ರಾಮೀಣ ಭಾಗದಲ್ಲಿ ಮನೆ ಮನೆಗೆ ಭೇಟಿ ನೀಡಿ ಜನರಿಗೆ ವಿಬಿ ಜಿ ರಾಮ್ ಜಿ ಯೋಜನೆಯಡಿ ಅಗತ್ಯವಿರುವವರಿಗೆ ಹೊಸ ಜಾಬ್ ಕಾರ್ಡ್ ಮಾಡಿಸಿಕೊಡುವುದು, ಜಾಬ್ ಕಾರ್ಡ್ ನವೀಕರಣ ಹಾಗೂ ಇ-ಇಥಿಬಿ ಪ್ರಕ್ರಿಯೆ ಪೂರ್ಣಗೊಳಿಸುವುದು ಸೇ-ರಿದಂತೆ ಉದ್ಯೋಗದ ಬೇಡಿಕೆಯನ್ನು ಸ್ವೀಕ-ರಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಕಾರ್ಮಿಕರ ಹಾಜರಾತಿ, ಕಾಮಗಾರಿಗಳ ಪ್ರಗತಿ ಹಾಗೂ ಸಂಬಂಧಿತ ದಾಖಲೆಗಳನ್ನು ಡಿಜಿಟಲ್ ವ್ಯವಸ್ಥೆಯ ಮೂಲಕ ನಿರ್ವಹಿಸುವುದಕ್ಕೂ ಒತ್ತು ನೀಡಲಾಗುತ್ತಿದೆ ಹಾಗೂ ಉದ್ಯೋಗದ ಉದ್ಯೋಗದ ಅವಕಾಶವ ಅವಕಾಶವನ್ನು ಅರ್ಹ ಕುಟುಂಬಗಳ ಮನೆಬಾಗಿಲಿಗೆ ತಲುಪಿಸುವುದು ನಮ್ಮ ಮುಖ್ಯ ಉದ್ದೇಶ, ಜಾಬ್ ಕಾರ್ಡ್, ಜಿ-ವಿಜಅ ಹಾಗೂ ಉದ್ಯೋಗದ ಬೇಡಿಕೆ ಸಲ್ಲಿಕೆ ಸೇರಿದಂತೆ ಯಾವುದೇ ಮಾಹಿತಿ ಅಗತ್ಯವಿದ್ದರೂ ಸಾರ್ವಜನಿಕರು ತಮ್ಮ ಗ್ರಾಮ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಬೇಕು. ಸ್ವಗ್ರಾಮದಲ್ಲಿಯೇ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಉದ್ಯೋಗ ಅರಸಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ತಡೆಯುವ ಆಶಯವೂ ಯೋಜನೆಯದ್ದಾಗಿದೆ. ಗ್ರಾಮೀಣ ಭಾಗದ ಅಕುಶಲ ಕೂಲಿಕಾರರ ಶ್ರೇಯೋಭಿವೃದ್ಧಿಗಾಗಿ ಜಾರಿಗೊಳಿಸಿರುವ ಈ ಜನಪರ ಯೋಜನೆಯ ಸದುಪಯೋಗವನ್ನು ತಾಲ್ಲೂಕಿನ ಎಲ್ಲ ಅರ್ಹ ಫಲಾನುಭವಿಗಳು ಪಡೆದುಕೊ ಮಳ್ಳಬೇಕು ಎಂದರು. ಮಾಹಿತಿ ಶಿಕ್ಷಣ ಸಂಯೋಜಕ ವಿರೇಶರವರು ಮಾತನಾಡಿ, ಆಗಸ್ಟ್ 15ರಿಂದ ಸೆಪ್ಟೆಂಬರ್ 15ರವರೆಗೆ ನಡೆಯುವ ವಿಶೇಷ ಅಭಿಯಾನದಲ್ಲಿ ನಿಷ್ಕ್ರಿಯ ಜಾಬ್ ಕಾರ್ಡ್ ಹೊಂದಿರುವ ಕುಟುಂಬಗಳನ್ನು ಗುರುತಿಸಿ ಮನೆ ಮನೆಗೆ ಭೇಟಿ ನೀಡಲಾಗುತ್ತಿದೆ ಈ ಸಂದರ್ಭದಲ್ಲಿ ಯೋಜನೆಯಡಿ ಲಭ್ಯವಿರುವ ಅಕುಶಲ ಉದ್ಯೋಗ ಹಾಗೂ ವೈಯಕ್ತಿಕ ಸವಲತ್ತುಗಳ ಕುರಿತು ಜನರಲ್ಲಿ ವ್ಯಾಪಕ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಮೀಣ ಭಾಗದ ದುರ್ಬಲ ವರ್ಗದ ಜನರ ಯೋಜನಾ ಭಾಗವಹಿಸು ವಿಕೆಯನ್ನು ಹೆಚ್ಚಿಸುವುದು, ಉದ್ಯೋಗ ಸೃಜನೆಯ ಮೂಲಕ ಆರ್ಥಿಕ ಹಾಗೂ ಜೀವನೋಪಾಯ ಭದ್ರತೆ ಕಲ್ಪಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಜಲ ಸಂರಕ್ಷಣೆ, ಅಂತರ್ಜಲ ಮರುಪೂರಣ ಹಾಗೂ ದೀರ್ಘ ಕಾಲೀನ ಜೀವನೋಪಾಯಕ್ಕೆ ನೆರವಾಗುವ ಕಾಮಗಾರಿ ಗಳಿಗೆ ಆದ್ಯತೆ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತಾಂತ್ರಿಕ ಸಿಬ್ಬಂದಿ ಸೇರಿದಂತೆ ಗ್ರಾಮ ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು.

## ಸಡಗರ ಸಂಭ್ರಮದಿಂದ ವರಮಹಾಲಕ್ಷ್ಮೀ ಹಬ್ಬ ಆಚರಣೆ





ಕುಷ್ಟಗಿ: ಶ್ರಾವಣ ಮಾಸದ ಪ್ರಮುಖ ಹಬ್ಬಗಳಲ್ಲಿ ಒಂದಾದ ವರಮಹಾಲಕ್ಷ್ಮೀ ಹಬ್ಬವನ್ನು ಕುಷ್ಟಗಿ ನಗರದೆಲ್ಲೆಡೆ ಶುಕ್ರವಾರ ಭಕ್ತಿ, ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ನಗರದ ಕೃಷ್ಣಗಿರಿ ಕಾಲೋನಿಯ ಸಾವಿತ್ರಿ ಜಿಗೇರಿ ಅವರ ಮನೆಯಲ್ಲಿ ವರಮಹಾಲಕ್ಷ್ಮೀ ಪೂಜೆಯನ್ನು ವಿಶೇಷವಾಗಿ ನೆರವೇರಿಸಲಾಯಿತು.

ಮಳೆಯ ಕೊರತೆಯಿಂದ ಹೂವು, ಹಣ್ಣು ಸೇರಿದಂತೆ ಹಬ್ಬದ ಸಾಮಗ್ರಿಗಳ ಬೆಲೆ ಗಗನಕ್ಕೇರಿದ್ದರೂ, ಹಬ್ಬದ ಸಂಭ್ರಮಕ್ಕೆ ಯಾವುದೇ ತೊಡಕಾಗಲಿಲ್ಲ. ಮನೆ ಹಾಗೂ ಮಂದಿರಗಳನ್ನು ತಳಿರು-ತೋರಣಗಳಿಂದ ಅಲಂಕರಿಸಲಾಗಿತ್ತು. ಮನೆಯ ಅಂಗಳದಲ್ಲಿ ಬಿಡಿಸಿದ್ದ ಬಣ್ಣಬಣ್ಣದ ರಂಗೋಲಿ ಹಬ್ಬದ ಸೊಬಗನ್ನು ಹೆಚ್ಚಿಸಿತ್ತು. ಮಹಿಳೆಯರು ಮುಂಜಾನೆ ಮಡಿಯುಟ್ಟು ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸಿ, ಸೀರೆ ಉಡಿಸಿ, ಬಗೆಬಗೆಯ ಹೂವು ಹಾಗೂ ಆಭರಣಗಳಿಂದ ಅಲಂಕರಿಸಿದರು. ಹಣ್ಣು, ಕಾಯಿ ಸೇರಿದಂತೆ ಒಬ್ಬಟ್ಟು ಹಾಗೂ ವಿವಿಧ ಭಕ್ಷ್ಯಗಳನ್ನು ತಯಾರಿಸಿ ನೈವೇದ್ಯ ಸಮರ್ಪಿಸಿ, ಇಷ್ಟಾರ್ಥ ಸಿದ್ಧಿಗಾಗಿ ದೇವಿಯಲ್ಲಿ ಪ್ರಾರ್ಥಿಸಿದರು. ಗುರುವಾರವೇ ಹೂವು, ಹಣ್ಣು, ಕಾಯಿ, ಬಾಳೆ ಕಂಬ ಸೇರಿದಂತೆ ಅಗತ್ಯ ವಸ್ತುಗಳನ್ನು ಜನರು ಖರೀದಿಸಿದ್ದರೂ, ಶುಕ್ರವಾರವೂ ನಗರದ ಮಾರುಕಟ್ಟೆಯಲ್ಲಿ ವ್ಯಾಪಾರ ಬಿರುಸಿನಿಂದ ನಡೆಯಿತು. ಕುಟುಂಬ ಸಮೇತರಾಗಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದ ಭಕ್ತರು, ಬಳಿಕ ಮನೆಗಳಲ್ಲಿ ಹಬ್ಬದೂಟ ಸವಿದರು. ಸಂಜೆ ಲಕ್ಷ್ಮೀದೇವಿಗೆ ದೀಪಾರತಿ ನೆರವೇರಿಸಿ, ನೆರೆಹೊರೆಯ ಮುತ್ತೈದೆಯರನ್ನು ಆಹ್ವಾನಿಸಿ ಹೂವು, ಹಣ್ಣು, ಬಳೆ, ರವಿಕೆ ಹಾಗೂ ಕುಂಕುಮ ನೀಡಿ ಸಂಭ್ರಮಿಸಿದರು.

## 10ನೇ ವರ್ಷದ ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನಕ್ಕೆ ಅಭೂತಪೂರ್ವ ಯಶಸ್ಸು

ಕೊಪ್ಪಳ: ಕೊಪ್ಪಳ ತೋಟಗಾರಿಕೆ ಇಲಾಖೆಯಿಂದ ಆ. 15 ರಿಂದ ಆ. 20ರವರೆಗೆ ಆರು ದಿನಗಳ ಕಾಲ ನಡೆದ 10ನೇ ವರ್ಷದ 'ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನ?2026'ಕ್ಕೆ ಸಾರ್ವಜನಿಕರು ಹಾಗೂ ರೈತರ ಅಭೂತಪೂರ್ವ ಬೆಂಬಲದೊಂದಿಗೆ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಒಟ್ಟಾರೆ 12,000ಕ್ಕೂ ಹೆಚ್ಚು ರೈತರು ಮತ್ತು ಸಾರ್ವಜನಿಕರು ಪಾಲ್ಗೊಂಡ ಈ ಮೇಳದಲ್ಲಿ 55 ಲಕ್ಷಕ್ಕೂ ಅಧಿಕ ಸಸಿಗಳು ಮತ್ತು ಪರಿಕರಗಳ ಬೇಡಿಕೆಯ ಬೃಹತ್ ವಹಿವಾಟು ನಡೆದಿದೆ.

"ಕಡಿಮೆ ಖರ್ಚು, ಕಡಿಮೆ ನಿರ್ವಹಣೆ ಮತ್ತು ನಿರಂತರ ಆದಾಯ" ಹಾಗೂ ಬದುವಿನಲ್ಲಿ ತೋಟಗಾರಿಕೆ ಬೆಳೆಗಳು, ಒಣ ಬೇಸಾಯ, ಬರ ನಿರ್ವಹಣೆ ಮತ್ತು ಮಳೆ ನೀರು ಕೊಯ್ಲು ಪರಿಕಲ್ಪನೆಯೊಂದಿಗೆ ಈ ಅಭಿಯಾನವನ್ನು ಆಯೋಜಿಸಲಾಗಿತ್ತು. *ವಿದೇಶಿ ಹಣ್ಣಿನ ಸಸಿಗಳಿಗೆ ಭಾರಿ ಬೇಡಿಕೆ:* ಅತ್ಯಂತ ದುಬಾರಿ ಮಿಯಾಜಾಕಿ ಮಾವಿನ 2,000ಕ್ಕೂ ಅಧಿಕ ಗಿಡಗಳಿಗೆ ಮತ್ತು 2,000ಕ್ಕೂ ಹೆಚ್ಚು ಅವಕಾಡೋ ಗಿಡಗಳಿಗೆ ಮುಂಗಡ ನೋಂದಣಿ ಆಗಿದೆ. ಮೆಕಡೋಮಿಯಾ, ಮ್ಯಾಂಗೋಸ್ಟಿನ್, ಲಿಚ್ಚಿ, ವಿದೇಶಿ ಹಲಸು ಹಾಗೂ ಚೆರ್ರಿ ಸೇರಿದಂತೆ 5,000ಕ್ಕೂ ಅಧಿಕ ವಿದೇಶಿ ಹಣ್ಣಿನ ಸಸಿಗಳ ಖರೀದಿಗೆ ಬೇಡಿಕೆ ವ್ಯಕ್ತವಾಗಿದೆ. ತೋಟಗಾರಿಕೆ ವಿಸ್ತರಣೆ ಮತ್ತು ಮಾರಾಟದ ಪ್ರಮುಖ ಅಂಶಗಳು ಪ್ರದೇಶ ವಿಸ್ತರಣೆ: ಈ ವರ್ಷ 3,000 ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ರೈತರು ಮುಂಗಡ ನೋಂದಣಿ ಮಾಡಿಕೊಂಡಿದ್ದಾರೆ. ಹೈಬ್ರಿಡ್ ತೆಂಗು:* ಕೋಲಂಗಟ್ ಆರೇಂಜ್, ಚೌಘಾಟ್ ಗ್ರೀನ್, ಗಂಗಾಬಾಂಡ್ ಮತ್ತು ಟ್ಠಡಿ ತಳಿಯ ತೆಂಗಿನ ಸಸಿಗಳನ್ನು 500ಕ್ಕೂ ಅಧಿಕ ಎಕರೆಗಳಲ್ಲಿ ನಾಟಿ ಮಾಡಲು ಬೇಡಿಕೆ ಬಂದಿದೆ. ಮಾರಾಟ ಹಾಗೂ ಮುಂಗಡ ಬುಕಿಂಗ್:* ಇಲಾಖಾ ಸಸ್ಯಾಗಾರದಿಂದ ಕೇಸರ್ ಮಾವು, ಲಿಂಬೆ, ತೆಂಗು, ತರಕಾರಿ ಹಾಗೂ ಅಲಂಕಾರಿಕ ಗಿಡಗಳು ಸೇರಿ ಒಟ್ಟು 3.50 ಲಕ್ಷಕ್ಕೂ ಹೆಚ್ಚು ಸಸಿಗಳು ಮಾರಾಟವಾಗಿದ್ದು, 4.50 ಲಕ್ಷ ಸಸಿಗಳಿಗೆ ಮುಂಗಡ ಬೇಡಿಕೆ ಬಂದಿದೆ. ಸಾವಯವ ಪರಿಕರಗಳು:* 100 ಟನ್ ಎರೆಹುಳು ಗೊಬ್ಬರ, 5,000 ಲೀಟರ್ ಎರೆಜಲ, 5,000 ಕೆ.ಜಿ. ಬೇವಿನ ಪುಡಿ ಹಾಗೂ 500 ಕೆ.ಜಿ. ಜೈವಿಕ ಪರಿಕರಗಳ ಮಾರಾಟವಾಗಿದೆ. ಕಾರ್ಯಕ್ರಮದಲ್ಲಿ ಮಾದರಿ ಕೈತೋಟ, ತಾರಸಿ ತೋಟ, ಹೈಡ್ರೋಪೋನಿಕ್ಸ್, ವರ್ಟಿಕಲ್ ಗಾರ್ಡನ್ ಹಾಗೂ ಬೋರ್‌ವೆಲ್ ರೀಚಾರ್ಜ್ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು. ಜೊತೆಗೆ, 300ಕ್ಕೂ ಹೆಚ್ಚು ರೈತರು ತಾಳೆಬೆಳೆ ಬೆಳೆಯಲು ಆಸಕ್ತಿ ತೋರಿದ್ದು, ಗಿಣಗೇರಾ ಪ್ರಯೋಗಾಲಯದಿಂದ ಮಣ್ಣು-ನೀರು ಪರೀಕ್ಷೆ ಮಾಹಿತಿ, ರಫ್ತು ಆಧಾರಿತ ಬಾಳೆ ಬೇಸಾಯ ಮತ್ತು ಸಾವಯವ ಹಲಸು ಬೆಳೆಯ ಕುರಿತು ಸಾವಿರಾರು ರೈತ-ರಿಗೆ ತಾಂತ್ರಿಕ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಾಯಿತು ಎಂದು ಕೊಪ್ಪಳ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ ಅವರು ತಿಳಿಸಿದ್ದಾರೆ.

## ಶ್ರೀಗಳ ಆಶೀರ್ವಾದ ಪಡೆಯಲು ಜಿ.ಎಸ್. ಪಾಟೀಲ ಕುದ್ರಿಮೋತಿಗೆ ಆಗಮನ

ಕುಕನೂರ: ತಾಲೂಕು ಕುದರಿಮೋತಿ ಗ್ರಾಮಕ್ಕೆ ಕರ್ನಾಟಕ ವಿಧಾನಸಭೆಯ ಅಧ್ಯಕ್ಷರು ಹಾಗೂ ರೋಣ ತಾಲೂಕಿನ ಶಾಸಕರಾದ ಗೌರವಾನ್ವಿತ ಜಿ.ಎಸ್. ಪಾಟೀಲ ಅವರು ನಾಳೆ ಆಗಸ್ಟ್ 22ರಂದು ಬೆಳಿಗ್ಗೆ 10 ಗಂಟೆಗೆ ಕುದ್ರಿಮೋತಿ ಗ್ರಾಮದ ಮೈಸೂರ ಮಠಕ್ಕೆ ಆಗಮಿಸಿ ಶ್ರೀಗಳ ಆಶೀರ್ವಾದ ಪಡೆಯಲಿದ್ದಾರೆ.



ಈ ಹಿನ್ನೆಲೆಯಲ್ಲಿ ಕುದ್ರಿಮೋತಿ ಗ್ರಾಮದ ಸಮಸ್ತ ನಾಗರಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಮಾನ್ಯ ಶಾಸಕರನ್ನು ಆತ್ಮೀಯವಾಗಿ ಸ್ವಾಗತಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಂಜುನಾಥ ಗಟ್ಟೆಪ್ಪನವರ, ಕುದ್ರಿಮೋತಿ ಮತ್ತು ಸುತ್ತಮುತ್ತಲಿನ ಗ್ರಾಮದವ-ರಿಗೆ ಕರೆ ನೀಡಿದ್ದಾರೆ. ಗ್ರಾಮದ ಎಲ್ಲ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಅವರು ಮನವಿ ಮಾಡಿದ್ದಾರೆ.

### ಜಿಲ್ಲಾ ಮಟ್ಟದ ಕಾರ್ಯಾಗಾರಕ್ಕೆ ಚಾಲನೆ

# ಮಕ್ಕಳ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ : ಉಪ ನಿರ್ದೇಶಕಿ ಶರಣಮ್ಮ

ರಾಯಚೂರು: ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಮಕ್ಕಳಿಲ್ಲದ ದಂಪತಿಗಳಿಗೆ ಕಾನೂನಾತ್ಮಕವಾಗಿ ದತ್ತು ಪಡೆಯುವುದು ಮತ್ತು ಬಾಲ್ಯ ವಿವಾಹ ನಿಷೇದ ಮಾಡುವಲ್ಲಿ ಅಧಿಕಾರಿಗಳ ಸಮನ್ವಯತೆ ಅತೀ ಮುಖ್ಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ ಕಾರನೂರು ಅವರು ಹೇಳಿದರು.

ಇತ್ತೀಚೆಗೆ ರಾಯಚೂರು ನಗರದ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ, ಮಾರ್ಗದರ್ಶಿ ಸೊಸೈಟಿ ಜಸ್ಟ್ ರೈಟ್ಸ್ ಫಾರ್ ಚಿಲ್ಡ್ರನ್ ರಾಯಚೂರು ಹಾಗೂ ಡಾನ್‌ಬೋಸ್ಕೋ ಸಂಸ್ಥೆ ದೇವದುರ್ಗ ಇವರ ಸಂಯುಕ್ತಾಶ್ರಯದಲ್ಲಿ ಪೋಷಕತ್ವ ಯೋಜನೆ, ಕಾನೂನಾತ್ಮಕ ದತ್ತು, ಬಾಲ್ಯ ವಿವಾಹ ನಿಷೇದ ಹಾಗೂ ಮಕ್ಕಳ ಹಕ್ಕುಗಳ ರಕ್ಷಣಾ ಕಾನೂನುಗಳ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಮೇಲ್ವಿಚಾರಕಿಯರು, ಪೊಲೀಸ್ ಇಲಾಖೆ ಅಧಿಕಾರಿ/ಸಿಬ್ಬಂದಿ, ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಸಹಾಯವಾಣಿ ಘಟಕ ಸಿಬ್ಬಂದಿಗಳಿಗೆ ಜಿಲ್ಲಾ ಮಟ್ಟದ ಒಂದು ದಿನದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪೋಷಕತ್ವ ಯೋಜನೆಯ ಅನುಷ್ಠಾನ ಮಾಡುವಲ್ಲಿ ಡಾನ್‌ಬೋಸ್ಕೋ ಸಂಸ್ಥೆಯು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಕಾರದೊಂದಿಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಕ್ಕಳಿಲ್ಲದ ದಂಪತಿಗಳಿಗೆ ಕಾನೂನಾತ್ಮಕವಾಗಿ ದತ್ತು ಪಡೆಯುವುದು ಮತ್ತು ಬಾಲ್ಯ ವಿವಾಹ ನಿಷೇದ ಮಾಡುವಲ್ಲಿ ಅಧಿಕಾರಿಗಳ ಸಮನ್ವಯತೆ ಅತೀ ಮುಖ್ಯವಾಗಿದೆ. ಅದರಂತೆ ಪ್ರತಿಯೊಂದು ಮಗುವು ತನ್ನ ಹಕ್ಕುಗಳನ್ನು ಅನುಭವಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು ನಮ್ಮ-ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.
ಈ ವೇಳೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮನ್ಸೂರ್ ಅಹ್ಮದ್ ಅವರು ಮಾತನಾಡಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಯೋಜನೆಗಳು ಮತ್ತು ಬಾಲಮಂದಿರಗಳ ಸೌಲಭ್ಯಗಳ ಕುರಿತು ತಿಳಿಸಿ, ಮಕ್ಕಳನ್ನು ದತ್ತು ನಿಯಮಗಳ ಪ್ರಕಾರ ಮಕ್ಕಳನ್ನು ಕಾನೂನಾತ್ಮಕ ದತ್ತು ಪಡೆಯುವುದು ಮತ್ತು ಪೋಷಕತ್ವದಿಂದ ಮಕ್ಕಳನ್ನು ದತ್ತು ಪಡೆಯುವುದು ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ಕಾನೂನುಗಳ ಕುರಿತು ತಿಳಿಸಿದರು.
ಕಲಬುರಗಿ ಮಾರ್ಗದರ್ಶಿ ಸೊಸೈಟಿ ನಿರ್ದೇಶಕ ಆನಂದ್‌ರಾಜ್ ಅವರು ಮಾತನಾಡಿ, ನಮ್ಮ ಸಂಸ್ಥೆಯು ಸುಮಾರು 24 ವರ್ಷಗಳಿಂದ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಮುಖವಾಗಿ ಬಾಲ್ಯ ವಿವಾಹ ನಿಷೇದ, ಬಾಲಕಾರ್ಮಿಕತೆ, ಶಿಕ್ಷಣದ ಕುರಿತು ಮಕ್ಕಳ ಹಕ್ಕುಗಳ ರಕ್ಷಿಸಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಕಾರದಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ ಎಂದರು.

ಸಹಾಯಕ ಸಬ್ ಇನ್ಸ್‌ಪೆಕ್ಟರ್ ಯಲ್ಲಪ್ಪ ಅವರು ಮಾತನಾಡಿ, ಮಕ್ಕಳ ರಕ್ಷಣೆಯ ಕು-ರಿತು ಪೊಲೀಸ್ ಇಲಾಖೆಯ ಪಾತ್ರದ ಕುರಿತು ತಿಳಿಸಿ, ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ 1098/112 ಬಗ್ಗೆ ಮಾಹಿತಿಯನ್ನು ತಿಳಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕುಮಾರ ಅವರು ಮಾತನಾಡಿ,



ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳ ಮೇಲಾಗುವ ದೌರ್ಜನ್ಯಗಳ ತಡೆ, ಬಾಲ್ಯ ವಿವಾಹ, ಬಾಲಕಾರ್ಮಿಕತೆ ನಿಷೇಧ ಹಾಗೂ ಬೀದಿ ಬದಿ ಮಕ್ಕಳ ರಕ್ಷಣೆ, ಬಾಲ ಭಿಕ್ಷಾಟನೆ ತಡೆ ಮತ್ತು ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗದಂತೆ ವಿವಿಧ ಇಲಾಖೆಗಳ ಸಹಕಾರದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯನಿರ್ವಹಣೆಯ ಕುರಿತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶಿವಮಲ್ಲು ಅವರು ಮಾತನಾಡಿ, ವಿಶ್ವ ಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆ, ಇದ-ರಿಂದಾಗಿ ನಮ್ಮ ದೇಶದಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡಲು ಇರುವ ಕಾನೂನುಗಳ ಕು-ರಿತು, ಅವುಗಳ ಅನುಷ್ಠಾನ ಮಾಡುವಲ್ಲಿ ವಿವಿಧ ಇಲಾಖೆಗಳ ಪಾತ್ರ ಕುರಿತು ತಿಳಿಸಿ, ಪೋಷಕತ್ವ ಯೋಜನೆ ಡಾನ್ ಬೋಸ್ಕೋ ಸಂಸ್ಥೆಯು ರಾಜ್ಯಾದಾದ್ಯಂತ ಕಾರ್ಯನಿರ್ವಹಿಸುತ್ತಿರವ ಕು-ರಿತು, ಮಕ್ಕಳ ರಕ್ಷಣಾ ನೀತಿ, ಡಾನ್ ಬೋಸ್ಕೋ ಸಂಸ್ಥೆಯು ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಹಕಾರದಲ್ಲಿ ಕಾರ್ಯನಿರ್ವಹಿಸುವ ಪೋಷಕತ್ವ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಕಿರಲಿಂಗಪ್ಪ ಅವರು ಮಾತನಾಡಿ, ಮಕ್ಕಳನ್ನು ಕಾನೂನಾತ್ಮಕವಾಗಿ ದತ್ತು ಹೇಗೆ ಪಡೆಯಬೇಕು, ದಂಪತಿಗಳಿಗೆ ಆಪ್ತ-ಸಮಾಲೋಚನೆ, ದಂಪತಿಗಳ ಮತ್ತು ಮಕ್ಕಳ ವಯಸಿನ ಮಿತಿ, ಮಿಷನ್ ವಾತ್ಸಲ್ಯ ಪೋರ್ಟಲ್ ಕಾರ್ಯನಿರ್ವಹಣೆ ಪ್ರಕ್ರಿಯೆ, ಸಲ್ಲಿಸಬೇಕಾದ ದಾಖಲಾತಿಗಳು, ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪಾತ್ರಗಳ ಕು-ರಿತು ಮತ್ತು ಕಾನೂನಾತ್ಮಕವಾಗಿ ಮಕ್ಕಳನ್ನು ಪಡೆಯಲು ಸಂಪೂರ್ಣವಾದ ಮಾಹಿತಿಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಎಂ.ಡಿ. ಗೋಕುಲ್, ರಾಯಚೂರು ಶಿಶು ಅಬಿವೃದ್ಧಿ ಯೋಜನಾಧಿಕಾರಿ ಮಂಜುನಾಥ, ವೆಂಕಟೇಶ, ಸರ್ಕಾರಿ ಬಾಲಕರ ಬಾಲಮಂದಿರ, ಭಾರತಿ, ಅಂಥೋನಿರಾಜ್, ತಿಕ್ಕಯ್ಯ, ಮಾರ್ಗದರ್ಶಿ ಸೊಸೈಟಿ ಕಲಬುರಗಿ ವ್ಯವಸ್ಥಾಪಕ ಸುನಂದ್,ಕು. ಈರಮ್ಮ, ಸಿದ್ದಲಿಂಗಪ್ಪ, ನಾಗಪ್ಪ, ರವೀಂದ್ರ, ನಾಗರಾಜ, ಹನುಮೇಶ್, ದಿನೇಶ್ ಕುಮಾರ್ ಸೇರಿದಂತೆ ಇತರರು ಇದ್ದರು.

# ನಕಲಿ ದಾಖಲೆ ಬಳಸಿ 62 ಎಕರೆ ಜಮೀನು ಗುಳುಂ ಮಾಡಲು ಯತ್ನ : ಲೋಕಾ ದಾಳಿಯಲ್ಲಿ ಪತ್ತೆ

ದೊಡ್ಡಬಳ್ಳಾಪುರ: ಸರ್ಕಾರಿ ಭೂ ದಾಖಲೆ ನಿರ್ವಹಣಾ ಸಾಫ್ಟ್ ವೇರ್ ಹಾಗೂ ಡಿಜಿಟಲ್ ಸಹಿ ದುರ್ಬಳಕೆ ಮಾಡಿಕೊಂಡು, ಸುಮಾರು 500 ಕೋಟಿ ರೂ. ಮೌಲ್ಯದ 62 ಎಕರೆ 22 ಗುಂಟೆ ಖಾಸಗಿ ಜಮೀನನ್ನು ಅಕ್ರಮವಾಗಿ ಖಾತೆ ವರ್ಗಾವಣೆ ಮಾಡಲು ಯತ್ನಿಸಿರುವ ಬೃಹತ್ ಅಕ್ರಮ ಪ್ರಕರಣವನ್ನು ಲೋಕಾಯುಕ್ತ ಸಂಸ್ಥೆ ಬಯಲಿಗೆಳೆದಿದೆ.

ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಸ್ವಯಂಪ್ರೇರಿತವಾಗಿ ಅಔಒಕಖಿ/ಗಕಐಔಏ/ೞಆ/2430/2026 ಪ್ರಕರಣ ದಾಖಲಿಸಿಕೊಂಡು ಶೋಧನಾ ವಾರಂಟ್ ಹೊರಡಿಸಿದ್ದರು. ಇದರ ಆಧಾರದ ಮೇಲೆ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಉಮಾಮಹೇಶ್ ಹಾಗೂ ಹಾಲಪ್ಪ ವೈ.ಬಾಲದಂಡಿ ನೇತೃತ್ವದ ತಂಡವು ಮೇ 7ರಂದು ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಕಚೇರಿ ಹಾಗೂ ದೇವನಹಳ್ಳಿ ತಹಶೀಲ್ದಾರ್ ಕಚೇರಿಗಳ ಮೇಲೆ ದಿಢೀರ್ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸಿದಾಗ ಅಕ್ರಮಗಳ ವಿವರಗಳು ಬೆಳಕಿಗೆ ಬಂದಿವೆ. ದೇವನಹಳ್ಳಿ ತಾಲೂಕಿನ ಸಣ್ಣ ಅಮಾನಿಕೆರೆ, ಬೈಚಾಪುರ ಹಾಗೂ ಪ್ರಸನ್ನಹಳ್ಳಿ ಗ್ರಾಮಗಳ ವ್ಯಾಪ್ತಿಯ ಒಟ್ಟು 84




ಸರ್ವೇ ನಂಬರ್‌ಗಳಿಗೆ ಸಂಬಂಧಿಸಿದ 62 ಎಕರೆ 22 ಗುಂಟೆ ಜಮೀನನ್ನು ಅಕ್ರಮವಾಗಿ ಖಾತೆ ವರ್ಗಾವಣೆ ಮಾಡಲು ಪ್ರಯತ್ನಿಸಲಾಗಿದೆ ಎಂದು ತನಿಖೆಯಲ್ಲಿ ಉಲ್ಲೇಖಿಸಲಾಗಿದೆ. ಈ ಜಮೀನಿನ ಸರ್ಕಾರಿ ಮಾರ್ಗಸೂಚಿ ಮೌಲ್ಯ 103.68 ಕೋಟಿ ರೂ.ಗಳಾಗಿದ್ದು, ಪ್ರಸ್ತುತ ಮಾರುಕಟ್ಟೆ ಮೌಲ್ಯ ಎಕರೆಗೆ ಸುಮಾರು 8 ಕೋಟಿ ರೂ.ನಂತೆ ಅಂ-ದಾಜಿಸಿದರೆ 500 ಕೋಟಿ ರೂ. ಮೀರಲಿದೆ ಎಂದು ತಿಳಿದುಬಂದಿದೆ.

**ನಕಲಿ ಆದೇಶ ಸೃಷ್ಟಿಸಿ ಅಕ್ರಮ :**

ಲೋಕಾಯುಕ್ತ ತನಿಖೆಯ ಪ್ರಕಾರ, ಇ-ಆಫೀಸ್‌ನಲ್ಲಿ ಜನರೇಟ್ ಆಗದ ನಕಲಿ ಆದ-ೇಶಗಳನ್ನು ಸೃಷ್ಟಿಸಿ, ದೇವನಹಳ್ಳಿ ತಹಶೀಲ್ದಾರ್ ಕಚೇರಿಗೆ ಕಳುಹಿಸಿ ಭೂಮಿ ತಂತ್ರಾಂಶದಲ್ಲಿ ದಾಖಲೆ ಸೇರ್ಪಡೆಗೆ ಕ್ರಮ ಕೈಗೊಳ್ಳಲಾಗಿದೆ. ನಕಲಿ ಆದೇಶಗಳಲ್ಲಿ ಉಲ್ಲೇಖಿಸಿದ್ದ ಹೈಕೋರ್ಟ್ ರಿಟ್ ಅರ್ಜಿಗಳು ಹಾಗೂ ಕೆಎಟಿ ಪ್ರಕರಣ ಸಂಖ್ಯೆಗಳು ಆನ್‌ಲೈನ್‌ನಲ್ಲಿ ಪರಿಶೀಲಿಸಿದಾಗ, ಅವು ಸಂಬಂಧಿತ ಜಮೀನುಗಳಿಗೆ ಸಂಬಂಧಿಸಿಲ್ಲ ಎಂಬುದು ಪತ್ತೆಯಾಗಿದೆ. ಇದಲ್ಲದೆ ಎಫ್‌ಡಿಎ ಮನೋಜ್ ಎಸ್. ಅವರ ಲಾಗಿನ್ ಮೂಲಕ ನಕಲಿ ದಾಖಲೆಗಳನ್ನು ಆರ್‌ಟಿಸಿ ಮ್ಯಾನೇಜ್‌ಮೆಂಟ್ ಟೂಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಬಳಿಕ ಅಂದಿನ ಉಪವಿಭಾಗಾಧಿಕಾರಿ ದುರ್ಗಾಶ್ರೀ ಅವರು ತಮ ಬಯೋಮೆಟ್ರಿಕ್ ಥಂಬ್ ಹಾಗೂ ಡಿಜಿಟಲ್ ಸಹಿ ಬಳಸಿ ಅನುಮೋದನೆ ನೀಡಿರುವುದಾಗಿ ತನಿಖೆಯಲ್ಲಿ ಉಲ್ಲೇಖಿಸಲಾಗಿದೆ. ಯಾವುದೇ ಅಧಿಕೃತ ಅರ್ಜಿ ಉಪವಿಭಾಗಾಧಿಕಾರಿ ಕಚೇ-ರಿಯಲ್ಲಿ ಸ್ವೀಕೃತವಾಗದಿದ್ದರೂ ಖಾತೆ ಬದಲಾವಣೆಗೆ ನೇರವಾಗಿ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗಿದೆ. ಅಲ್ಲದೆ, ಕಚೇರಿ ಕಾರ್ಯಗಳಿಗೆ ಅಧಿಕೃತ ಕಂಪ್ಯೂಟ-ರ್ ಬದಲಿಗೆ ಖಾಸಗಿ ಲ್ಯಾಪ್‌ಟಾಪ್ ಬಳಸಿರುವ ಅಂಶವೂ ತನಿಖೆಯಲ್ಲಿ ಪತ್ತೆಯಾಗಿದೆ ಎಂದು ತಿಳಿಸಲಾಗಿದೆ.

**57 ಎಕರೆಗೂ ಅಧಿಕ ಜಮೀನು ಅಕ್ರಮ ಖಾತೆ :**

ಒಟ್ಟು 84 ಸರ್ವೇ ನಂಬರ್‌ಗಳ 62 ಎಕರೆ 22 ಗುಂಟೆ ಜಮೀನಿನ ಪೈಕಿ 72 ಸರ್ವೇ ನಂಬರ್‌ಗಳಿಗೆ ಸೇರಿದ 57 ಎಕರೆ 04.08 ಗುಂಟೆ ಜಮೀನು ಈಗಾಗಲೇ ಅಕ್ರಮವಾಗಿ ಖಾತೆಯಾಗಿರುವುದಾಗಿ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ನ್ನು ತಕರಾರು ಕಾರಣದಿಂದ 6 ಸರ್ವೇ ನಂಬರ್‌ಗಳ 3 ಎಕರೆ 01.08 ಗುಂಟೆ ಜಮೀನಿನ ಖಾತೆ ವರ್ಗಾವಣೆ ತಡೆಯಲ್ಪಟ್ಟಿದೆ. ಮತ್ತೊಂದೆಡೆ ಯಾವುದೇ ಆದೇಶವಿಲ್ಲದೆ 6 ಸರ್ವೇ ನಂಬರ್‌ಗಳಿಗೆ ಸೇರಿದ 2 ಎಕರೆ 16 ಗುಂಟೆ ಜಮೀನನ್ನು ನೇರವಾಗಿ ಖಾತೆ ಮಾಡಿರುವುದಾಗಿ ತನಿಖೆಯಲ್ಲಿ ತಿಳಿದುಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದೊಡ್ಡಬಳ್ಳಾಪುರ ಉಪವಿಭಾಗದ ಹಿಂದಿನ ಉಪವಿಭಾಗಾಧಿಕಾರಿ ದುರ್ಗಾಶ್ರೀ ಹಾಗೂ ಪ್ರಥ-ಮ ದರ್ಜೆ ಸಹಾಯಕ ಮನೋಜ್ ಎಸ್. ಅವ-ರಿಗೆ ಸೆಪ್ಟೆಂಬರ್ 22ರಂದು ಲೋಕಾಯುಕ್ತ ಪೀಠದ ಮುಂದೆ ಖುದ್ದಾಗಿ ಹಾಜರಾಗಿ ತಮ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಸೂಚಿಸಿದ್ದಾರೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com